40th Year of Publication. Phone: 3728.

ವಾರ್ಷಿಕ ಚಂದಾ ರೂ. 12—50.

ಪ್ರಭಾತ

ಬೆಲೆ 20 ಪೈಸೆ.

ಸಂಪುಟ: ೪೦. ಸಂಚಿಕೆ: ೩೯. | ಸಂಪಾದಕ: ಕುಡ್ಪಿ ವಾಸುದೇವ ಶೆಣೈ. ರವಿವಾರ ತಾ. 3—11—1974 | VOL. 40. No. 39.

ಜಿಲ್ಲಾ ಕೊಂಗ್ರೆಸ್ಸಿಗೆ ತಾತ್ಕಾಲಿಕ ಅಧ್ಯಕ್ಷೆ

ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಸಮಿತಿಯ ಮಹಾಸಭೆ ಜರಗಿ ಓರ್ವ ನೂತನ ಅಧ್ಯಕ್ಷರನ್ನು ಆರಿಸುವ ತನಕ ಶಾಸಕಿ ಹಾಗೂ ಜಿಲ್ಲಾ ಕೊಂಗ್ರೆಸ್ ಉಪಾಧ್ಯಕ್ಷೆ ಶ್ರೀಮತಿ ವಿನ್ನಿ ಫೆರ್ನಾಂಡಿಸ್ ತಾತ್ಕಾಲಿಕ ಅಧ್ಯಕ್ಷೆಯಾಗಿರುವಂತೆ ಕರ್ನಾಟಕ ಪ್ರದೇಶ ಕೊಂಗ್ರೆಸ್ ಅಧ್ಯಕ್ಷ ಶ್ರೀ| ಕೆ. ಎಚ್. ಪಾಟೀಲ್ ಆದೇಶವಿತ್ತಿರುವರಾಗಿ ತಿಳಿಯಲಾಗಿದೆ.

ಹೊಸ ಸಂಪುಟದಲ್ಲಿ ಜಿಲ್ಲೆಗೆ ಪ್ರಾತಿನಿಧ್ಯ

ಕರ್ನಾಟಕ ಮುಖ್ಯಮಂತ್ರಿ ಶ್ರೀ| ದೇವರಾಜ್ ಅರಸರು ಪುನರ್ರಚಿಸಿದ ಸಂಪುಟದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ| ವೀರಪ್ಪ ಮೊಯ್ಲಿ ಮತ್ತು ಶ್ರೀಮತಿ ಮನೋರಮಾ ಮಧ್ವರಾಜ್ ಅವರಿಗೆ ಸಹಾಯಕ ಸಚಿವರ ಸ್ಥಾನ ಕೊಡಲಾಗಿದೆ. ಶ್ರೀ| ವೀರಪ್ಪ ಮೊಯ್ಲಿಯವರು ಸಣ್ಣ ಕೈಗಾರಿಕಾ ವಿಭಾಗದ ಸಹಾಯಕ ಸಚಿವರಾಗಿಯೂ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಮಹಿಳಾ ಮತ್ತು ಶಿಶುಕಲ್ಯಾಣ ವಿಭಾಗದ ಸಹಾಯ ಸಚಿವೆಯಾಗಿಯೂ ನೇಮಿಸಲ್ಪಟ್ಟಿರುವರು.

ಸೈಕ್ಲಿಂಗ್ ಸ್ಪರ್ಧೆ

ಪುತ್ತೂರು ಸೈಂಟ್ ಫಿಲೊಮಿನಾ ಹೈಸ್ಕೂಲಿನ ರಜತೋತ್ಸವ ಸಮಾರಂಭದ ಅಂಗವಾಗಿ ಏರ್ಪಡಿಸಿದ್ದ ಪುತ್ತೂರು—ಬಿ. ಸಿ. ರೋಡ್—ಪುತ್ತೂರು 26 ಮೈಲು ಅಂತರದ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಮಂಗಳೂರಿನ ಶ್ರೀ| ನೋರ್ಬರ್ಟ್ ಡಿ'ಸೋಜಾ ಪ್ರಥಮಸ್ಥಾನವನ್ನೂ ಶ್ರೀ| ಜೊಸ್ಸಿ ಮೆಕ್ಸಿಮ್ ಸಲ್ದಾನಾ ದ್ವಿತೀಯ ಸ್ಥಾನವನ್ನೂ ಡೆಕ್ಕನ್ ಎಥ್ಲೆಟಿಕ್ ಕ್ಲಬ್ಬಿನ ತೆನೊರ್ಸ್ ಅಂಟಾವೋರವರು ತೃತೀಯ ಸ್ಥಾನವನ್ನೂ ಗಳಿಸಿರುವರು.

ತುಳು ನಾಟಕ ಕೃತಿಯ ಉದ್ಘಾಟನೆ

ಮಣ್ಣಗುಡ್ಡೆ "ವೀಣಾ ಸಾಹಿತ್ಯ ನಿಲಯ."ದ ವತಿಯಿಂದ ಪ್ರಕಾಶನಗೊಂಡ ಭಾಸ್ಕರ ಟಿ. ಬಂಗೇರ ವಿರಚಿತ "ಬಂಗಾರದ ಬಿಸತ್ತಿ" ಎಂಬ ತುಳು ನಾಟಕ ಕೃತಿಯನ್ನು ಇತ್ತೀಚೆಗೆ ಮಣ್ಣಗುಡ್ಡೆ ಸರಕಾರಿ ಹಾಯರ್ ಪ್ರೈಮರಿ ಶಾಲಾ ಸಭಾಭವನದಲ್ಲಿ ಶ್ರೀ| ಕೆ. ಎನ್. ಟಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಜಿಲ್ಲೆಯ ಹಿರಿಯ ಪತ್ರಿಕೋದ್ಯಮಿ ಶ್ರೀ| ನಾರಾಯಣರಾವ್ ಕಲ್ಲೆ ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ರಾಜ್ಯಪ್ರಶಸ್ತಿವಿಜೇತ ಶ್ರೀ| ಎಸ್. ಆರ್. ಬಾಲಗೋಪಾಲ್‌ರವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಪಂಜಿನ ಮೆರವಣಿಗೆ

ಶ್ರೀ| ಜಯಪ್ರಕಾಶ ನಾರಾಯಣರ ಹುಟ್ಟುಹಬ್ಬದ ಅಂಗವಾಗಿ ಕರ್ನಾಟಕ ಐಕ್ಯ ಯುವಜನರಂಗದ ದ. ಕ. ಜಿಲ್ಲಾ ಶಾಖೆಯ ವತಿಯಿಂದ ತಾ. 25ರಂದು ಸಂಜೆ ಪಂಜಿನ ಮೆರವಣಿಗೆಯೊಂದನ್ನು ಮಂಗಳೂರಲ್ಲಿ ಏರ್ಪಡಿಸಲಾಗಿತ್ತು. ಶರವು ಮಹಾಗಣಪತಿ ದೇವಾಲಯದಿಂದ ಹೊರಟ ಮೆರವಣಿಗೆಯು ಪ್ರಮುಖ ಬೀದಿಗಳನ್ನು ಹಾದು ಭವಂತೀಸ್ಟ್ರೆ, ನ್ಯೂಚಿತ್ರಾ ಟಾಕೀಸ್, ಅಳಕೆ ಸಂಕದ ಬಳಿಯಿಂದಾಗಿ ಕಂಬ್ಳಾ ಕ್ರೊಸಿನಲ್ಲಿ ಮುಕ್ತಾಯವಾಗಿತ್ತು. ಈ ಮೆರವಣಿಗೆಯಲ್ಲಿ ಸುಮಾರು 500 ಕ್ಕೂ ಮಿಕ್ಕಿ ವಿದ್ಯಾರ್ಥಿಗಳು, ಯುವಕರು ಭಾಗವಹಿಸಿದ್ದರು.

ಪ್ರಶಸ್ತಿ ಸಮಿತಿಯಲ್ಲಿ ತುಳುಕೂಟದವರು

1972—73 ಮತ್ತು 73—74ರ ತುಳು ಚಲನಚಿತ್ರಗಳಿಗೆ ಪ್ರಶಸ್ತಿನೀಡುವ ಬಗ್ಗೆ ಕರ್ನಾಟಕ ಸರಕಾರ ನೇಮಿಸಿರುವ ಚಲನಚಿತ್ರ ಪ್ರಶಸ್ತಿ ಸಲಹಾಸಮಿತಿಯಲ್ಲಿ ತುಳು ಕೂಟದ ಬೆಂಗಳೂರು ಶಾಖೆಯ ಅಧ್ಯಕ್ಷ ಶ್ರೀ| ಎ. ಟಿ. ರಾಜಶೇಖರ ಶೆಟ್ಟಿ ಅವರನ್ನು ಸೇರಿಸಲಾಗಿದೆ.

ಸಿಟ್ಟಿಂಗ್ ಮಿಲ್ಸ್ ಸ್ಥಾಪನೆ

ಮಣಿಪಾಲದ ಸಹಕಾರೀ ಕೈಗಾರಿಕಾ ಕೊಲನಿಯಲ್ಲಿ ಶ್ರೀಗಳಾದ ಎಂ. ಎಸ್. ಕೃಷ್ಣನ್ ಮತ್ತು ಐ. ನಾರಾಯಣರ ಸಹಭಾಗಿತ್ವದಲ್ಲಿ ಸ್ಥಾಪಿಸಲಾದ ಶ್ರೀದೇವಿ ಸಿಟ್ಟಿಂಗ್ ಮಿಲ್ಲಿನ ಉದ್ಘಾಟನೆಯನ್ನು ತಾ. 25ರಂದು ಪದ್ಮಶ್ರೀ ಡಾ| ಟಿ. ಎಂ. ಎ. ಪೈಯವರು ದೀಪ ಬೆಳಗಿಸುವುದರೊಂದಿಗೆ ನಡೆಸಿದರು. ಮುಖ್ಯ ಅತಿಥಿಗಳಾಗಿ ಮಣಿಪಾಲ ಇನ್ಸ್‌ಟಿಟ್ಯೂಟ್ ಒಫ್ ಟೆಕ್ನಾಲಜಿಯ ಪ್ರಾಂಶುಪಾಲ ಪ್ರೊ| ಬಿ. ವಿ. ಕೃಷ್ಣಮೂರ್ತಿರಾಯರು ಭಾಗವಹಿಸಿದರು.

ಸುಂಕ ಕೈಬಿಡಲು ಒತ್ತಾಯ

100 ಅಡಿ ಮತ್ತು ಅದಕ್ಕಿಂತ ಉದ್ದದ ಸೇತುವೆಗಳ ಮೇಲೆ ಹಾದುಹೋಗುವ ಮೋಟಾರು ವಾಹನಗಳ ಮೇಲೆ ಹೊಸ ಸುಂಕವೊಂದನ್ನು ವಿಧಿಸುವ ರಾಜ್ಯದ ಸಾರ್ವಜನಿಕ ಕಾಮಗಾರಿ ಸಚಿವರು ಮಾಡಿರುವರೆನ್ನಲಾದ ಪ್ರಸ್ತಾಪವನ್ನು ಕೈಬಿಡಬೇಕೆಂದು ದ. ಕ. ಟ್ರಾನ್ಸ್‌ಪೋರ್ಟ್ ಒಪರೇಟರ್ಸ್ ಎಸೋಸಿಯೇಶನು ಕರ್ನಾಟಕ ರಾಜ್ಯ ಸರಕಾರವನ್ನು ವಿನಂತಿಸಿದೆ.

——

ಕುರಿಗಳನ್ನು ರಕ್ಷಿಸಲು ತಿರುಪತಿಯಲ್ಲಿ ಸಂಶೋಧನೆ

"ಬಾ ಬಾ ಬ್ಲೇಕ್ ಶೀಪ್, ಹೆವ್ ಯು ಎನೀ ವುಲ್? ಯಸ್ ಸರ್, ಯಸ್ ಸರ್, ತ್ರೀ ಬೇಗ್ಸ್ ಫುಲ್......."

ಇದು ನರ್ಸರಿ ಶಾಲೆಗಳ ಜನಪ್ರಿಯ ಪದ್ಯ. ಆದರೆ ಈಗ ದೊರೆಯುತ್ತಿರುವುದಕ್ಕಿಂತ ಇನ್ನೂ ಹೆಚ್ಚು ಚೀಲಗಳ ಭರ್ತಿ ಉಣ್ಣೆ ಹಾಗೂ ಬೇಕಾದಷ್ಟು ಮಾಂಸವೂ ದೊರೆಯಬಹುದು—ಕುಖ್ಯಾತ ಮಾರಕ ವ್ಯಾಧಿ ನ್ಯುಮೋನಿಯಾ ದೂರವಾದರೆ ಮಾತ್ರ!

ತಿರುಪತಿಯ ಕಾಲೇಜ್ ಆಫ್ ವೆಟರ್ನರಿ ಸೈನ್ಸ್‌ನ ಪ್ಯಾಥಾಲಜಿಸ್ಟರು ಇತ್ತೀಚೆಗೆ ಈ ವ್ಯಾಧಿಯ ಸ್ವರೂಪದ ಬಗೆಗೆ ಅಧ್ಯಯನ ನಡೆಸಿದರು. ಭಾರತದಲ್ಲಿರುವ ಸುಮಾರು 4೦ ಮಿಲಿಯ ಕುರಿಗಳ ಪೈಕಿ ಸುಮಾರು ಶೇಕಡ 13ರಿಂದ 20ರಷ್ಟು ಕುರಿಗಳು ನ್ಯುಮೋನಿಯಾ ಸೋಂಕಿಗೆ ಗುರಿಯಾಗಿ, ಅವುಗಳ ಉಣ್ಣೆ ಹಾಗೂ ಮಾಂಸದ ಉತ್ಪಾದನೆ ನಷ್ಟವಾಗುತ್ತಿದೆ ಎಂದು ಈ ರೋಗಶಾಸ್ತ್ರಜ್ಞರು ಹೇಳುತ್ತಾರೆ.

ಕೊಲೇಜ್ ಆಫ್ ವೆಟರ್ನರಿ ಸಾಯನ್ಸ್‌ನ ಪ್ರಿನ್ಸಿಪಾಲರೂ ಹಾಗೂ ಸಂಶೋಧನ ಪ್ರಾಜೆಕ್ಟಿನ ಪ್ರಧಾನ ಸಂಶೋಧಕರೂ ಆದ ಡಾ| ಜಿ. ಎ. ಶಾಸ್ತ್ರಿ ಅವರು, ಒಟ್ಟು 638 ಪ್ರಕರಣಗಳನ್ನು ಪರಿಶೀಲಿಸಲಾಯಿತು ಎಂದು ಹೇಳಿದ್ದಾರೆ.

ಎಪ್ರಿಲ್ ಮತ್ತು ಜುಲೈ ತಿಂಗಳುಗಳಲ್ಲಿ ಈ ವ್ಯಾಧಿಯ ಸಂಭವ ಅತ್ಯಧಿಕವಾಗಿದ್ದುದು ಕಂಡುಬಂತು ಎಂದು ಡಾ| ಶಾಸ್ತ್ರೀ ಹೇಳಿದರು. "ವಿಪರೀತ ಶಖೆ, ಶೀತ ಮತ್ತು ಮಳೆ ಮುಂತಾದ ತೀವ್ರ ಹವಾ ಪರಿಸ್ಥಿತಿಗಳೂ ಈ ವ್ಯಾಧಿಗೆ ಕಾರಣವಾಗುತ್ತವೆ" ಎಂದರು ಅವರು.

ತಿರುಪತಿ ವೆಟರ್ನರಿ ಕೊಲೇಜಿನ ಈ ಮೂರು ವರ್ಷಗಳ ಅಧ್ಯಯನಕ್ಕೆ ಅಮೆರಿಕಾ ಸರಕಾರವು ಪಿ ಎಲ್-480ರ ನಿಧಿಗಳಿಂದ 55,000 ರೂ.ಗಳ ಗ್ರೇಂಟ್ ನೀಡಿದೆ.

——

ಅತ್ಯಾವಶ್ಯಕ ಸಂಸ್ಥೆ: ವಿಶ್ವಸಂಸ್ಥೆ

(ಪ್ರೊ| ಎಸ್. ವಿ. ರಾಮಣ್ಣ)

ವಿಶ್ವದಾದ್ಯಂತ ಶಾಂತಿಯ ಸ್ಥಾಪನೆ, ಪಾಲನೆ ವಿಶ್ವಸಂಸ್ಥೆಯ ಮೂಲ ಧ್ಯೇಯ. ಎರಡು ಮಹಾ ಯುದ್ಧಗಳ ವಿಪತ್ತಿನ ನಂತರ ಈ ಧ್ಯೇಯ ಸಾಧನೆಗೆ ಎಲ್ಲಾ ರಾಷ್ಟ್ರಗಳು ಒಪ್ಪಿ ಮಾನ್ಯತೆ ನೀಡಿವೆ. ವಿಶ್ವ ಶಾಂತಿಯ ಸ್ಥಾಪನೆಗಾಗಿ ಇಂದಿಗೆ 29 ವರ್ಷಗಳ ಹಿಂದೆ ಅಕ್ಟೋಬರ್ 24ರಂದು ವಿಶ್ವಸಂಸ್ಥೆ ಸ್ಥಾಪನೆಯಾಯಿತು. ಇಂದಿಗಿಂತ ಭವಿಷ್ಯದಲ್ಲಿ ಈ ಸಂಸ್ಥೆಗೆ ಮಹತ್ವದ ಸ್ಥಾನ ದೊರೆಯಲಿದೆ.

ಜಗತ್ತಿನ ರಾಜಕೀಯ ಮತ್ತು ತಾಂತ್ರಿಕ ಕಾರಣಗಳಿಗಾಗಿ ಇಂದು ವಿಶ್ವಸಂಸ್ಥೆ ಅತ್ಯಾವಶ್ಯಕ ಸಂಸ್ಥೆ. ಶಾಂತಿಯ ಪಾಲನೆ ಉದ್ದೇಶದಿಂದ ತನ್ನ ಸ್ಥಾಪನೆಯ 29 ವರ್ಷಗಳಲ್ಲಿ ವಿಶ್ವಸಂಸ್ಥೆ ಇರಾನ್, ಗ್ರೀಸ್, ಕಾಶ್ಮೀರ, ಕೊಂಗೊ, ಕ್ಯೂಬಾ, ಮಧ್ಯಪ್ರಾಚ್ಯ ಮತ್ತು ಪೆಸಿಫಿಕ್‌ಗಳಲ್ಲಿ ನಡೆಯಬಹುದಾಗಿದ್ದ ಯುದ್ಧಗಳನ್ನು ತಡೆದಿದೆ. ಸಮರಗಳು ನಡೆದಿದ್ದಲ್ಲಿ ನಮ್ಮ ಜೀವಕ್ಕೆ ತೊಂದರೆಯಾಗುತಿತ್ತು. ವಿಶ್ವಸಂಸ್ಥೆಯನ್ನು ಬಲಗೊಳಿಸುವುದು ಎಲ್ಲಾ ರಾಷ್ಟ್ರಗಳ ದೃಷ್ಟಿಯಿಂದ ಪ್ರಯೋಜನಕಾರಿಯಾಗಿದೆ. ನಿಶ್ಶಸ್ತ್ರೀಕರಣವೊಂದೇ ಶಾಂತಿಪಾಲನೆಯ ದಾರಿಯಾಗಿದ್ದು ಈ ಬಗ್ಗೆ ವಿಶ್ವಮಟ್ಟದ ಚರ್ಚೆ ಅತ್ಯಗತ್ಯವಾಗಿದೆ.

ಬಡತನವು ಅಶಾಂತಿಗೆ ಮೂಲ ಕಾರಣ. ಬಡತನದ ನಿವಾರಣೆಯತ್ತ ವಿಶ್ವಸಂಸ್ಥೆ ಪ್ರಯತ್ನಿಸಿದೆ. ಏಷ್ಯಾ ಮತ್ತು ದೂರಪ್ರಾಚ್ಯ ರಾಷ್ಟ್ರಗಳ ಆರ್ಥಿಕ ಸಹಕಾರ, ವಿಶ್ವ ಆಹಾರ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ ಇತ್ಯಾದಿಗಳ ಮೂಲಕ ಸದಸ್ಯರಾಷ್ಟ್ರಗಳಿಗೆ ತನ್ನದೇ ಆದ ನೆರವನ್ನು ನೀಡಿ ಶಾಂತಿಸ್ಥಾಪನೆಯತ್ತ ಯಶಸ್ವಿ ಪ್ರಯತ್ನ ನಡೆಸಿದೆ. 1965ರ ಭಾರತ—ಪಾಕೀಸ್ತಾನ ಕದನ ನಂತರದ ಶಾಂತಿಸ್ಥಾಪನೆಗಾಗಿ ಉಥಾಂಟ್ ಬಂದಿದ್ದರು. ವಿಶ್ವರಾಷ್ಟ್ರಗಳ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ವಿಶ್ವಸಂಸ್ಥೆಯ ಮತ್ತೊಂದು ಗುರಿಯಾಗಿದ್ದು ಈ ದಿಶೆಯಲ್ಲೂ ಮಹತ್ವದ ಸೇವೆ ಸಲ್ಲಿಸಿದೆ. ಇಕಾಫೆ, ವಿಶ್ವ ಕಾರ್ಮಿಕ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ ಮತ್ತು ವಿಶ್ವ ಆಹಾರ ಸಂಸ್ಥೆಗಳು ಬಹಳಷ್ಟು ಸೇವೆ ಸಲ್ಲಿಸಿದ್ದು ಮಾನವೀಯ ವಾತಾವರಣ ಕುದುರಿಸಲು ಪ್ರಯತ್ನ ನಡೆದಿದೆ.

ಜಾಗತಿಕ ಸಮುದಾಯದ ಅಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ ಎಲ್ಲಾ ಜನತೆಗೆ ಸಮಾನವಾದ ನ್ಯಾಯ ದೊರಕಿಸಿಕೊಡುವುದರಲ್ಲಿ ಈ ಸಂಸ್ಥೆ ತನ್ನ ಪ್ರಯತ್ನಗಳನ್ನು ಮುಂದುವರಿಸಿದೆ.

(ಆಕಾಶವಾಣಿ ಕೃಪೆ)

——

ಕರ್ನಾಟಕ— ನಡೆದುಬಂದ ದಾರಿ

ಉಜ್ವಲ ಇತಿಹಾಸಪರಂಪರೆಯುಳ್ಳ ಕನ್ನಡ ಪ್ರದೇಶ ಒಂದು ರಾಜ್ಯವಾಗಿ ರೂಪುಗೊಂಡಿದ್ದು 1956ರಲ್ಲಿ. ಒಂದು ವರುಷದ ಹಿಂದೆ ಕರ್ನಾಟಕವೆಂದು ಹೆಸರಿಟ್ಟುಕೊಂಡು ಭಾವನಾತ್ಮಕ ಸಮಗ್ರತೆ ಪಡೆಯಿತು.

ಕರ್ನಾಟಕವು ಎಲ್ಲ ಸಂಪನ್ಮೂಲಗಗಳಲ್ಲೂ ಸಮೃದ್ಧ ಪ್ರದೇಶ. ಅವುಗಳನ್ನು ಬಳಸಿಕೊಂಡು ರಾಜ್ಯದ ಉಜ್ವಲ ಭವಿಷ್ಯಕ್ಕೆ ಬುನಾದಿ ಒದಗಿಸಲು ಈಗ ಜರಗುತ್ತಿರುವ ಅಭಿವೃದ್ಧಿ ಕಾರ್ಯಗಳ ಸಿಂಹಾವಲೋಕನದಿಂದ ನಡೆದುಬಂದ ದಾರಿಯಲ್ಲಿಯ ಮಹತ್ವದ ಮೈಲುಗಲ್ಲುಗಳನ್ನು ಸ್ಪಷ್ಟವಾಗಿ ಕಾಣಬಹುದು.

ಕಳೆದ ಎರಡು ದಶಕಗಳಲ್ಲಿ ಆಹಾರ ಉತ್ಪಾದನೆ ದ್ವಿಗುಣಿತವಾಗಿದೆ. ಕೃಷಿ ಕ್ಷೇತ್ರದಲ್ಲಿ ನೂತನ ವಿಕ್ರಮ ಸಾಧಿಸಲಾಗಿದೆ. ವರಲಕ್ಷ್ಮಿ ಹತ್ತಿಯ ಬೆಳೆಯು ವರವಾಗಿ ಪರಿಣಮಿಸಿದೆ. ಕಬ್ಬು, ಎಣ್ಣೆ ಕಾಳುಗಳು ಹಾಗೂ ಇತರ ಬೆಳೆಗಳ ಉತ್ಪಾದನೆ ಅಧಿಕವಾಗಿದೆ.

ವಿದ್ಯುತ್ ಪೂರೈಕೆಯ ವಿಷಯದಲ್ಲಿ, ಕಾಳೀ—ಯೋಜನೆ ಒಂದು ಹೊಸ ಅಧ್ಯಾಯ. 1978ರ ಹೊತ್ತಿಗೆ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. ಈ ಯೋಜನೆಯಿಂದ 910 ಮೇಗಾವ್ಯಾಟ್ ವಿದ್ಯುತ್ ದೊರೆಯುವುದು. ಅಂದರೆ 4000 ದಶಲಕ್ಷ ಘಟಕಗಳನ್ನು ಪಡೆಯಬಹುದು. ಇದರಿಂದ ರಾಜ್ಯದ ವಿದ್ಯುತ್ ಉತ್ಪಾದನೆ ಎರಡರಷ್ಟು ಹೆಚ್ಚುವುದು. ಈಗ ರಾಜ್ಯದಲ್ಲಿ ಅರ್ಧಕ್ಕಿಂತ ಹೆಚ್ಚು ಸಂಖ್ಯೆಯ ಹಳ್ಳಿಗಳಿಗೆ ವಿದ್ಯುತ್ ಪೂರೈಕೆಯಾಗಿದೆ. ಉಳಿದರ್ಧ ಹಳ್ಳಿಗಳಿಗೆ ಐದನೇ ಯೋಜನೆ ಅವಧಿಯಲ್ಲಿ ಈ ಸೌಕರ್ಯ ಒದಗಲಿದೆ.

ಉದ್ದಿಮೆ ಕ್ಷೇತ್ರದಲ್ಲಿ ಎಂದಿನಿಂದಲೂ ಒಂದು ಹೆಜ್ಜೆ ಮುಂದಿದೆ. ರಾಜ್ಯದಲ್ಲಿ 1956ರಲ್ಲಿ 1635ರಷ್ಟು ಕಾರ್ಖಾನೆಗಳಿದ್ದವು. ಅವುಗಳ ಸಂಖ್ಯೆ ಇಂದು 4000ಕ್ಕೆ ಸಮೀಪಿಸಿದೆ.

ರೇಶಿಮೆ ಉದ್ದಿಮೆಯಲ್ಲಿ ರಾಜ್ಯವು ವೈಶಿಷ್ಟ್ಯಪೂರ್ಣ ಪ್ರಗತಿ ಸಾಧಿಸಿದೆ. ನಾಲ್ಕನೇ ಯೋಜನೆ ಅವಧಿಯಲ್ಲಿ 14 ಲಕ್ಷ ಕೆ. ಜಿ.ಯಿಂದ 20 ಲಕ್ಷ ಕೆ. ಜಿ.ಯಷ್ಟು ಉತ್ಪಾದನೆ ಹೆಚ್ಚಿದೆ. ಇತ್ತೀಚೆಗೆ 'ಬಾಯೊ-ವೋಲ್ಟಿನ್' ತಳಿಯ ಶೋಧನೆ ಈ ಉದ್ದಿಮೆಯಲ್ಲಿ ನೂತನ ಯುಗವನ್ನೇ ಪ್ರಾರಂಭಿಸಿದೆ.

ಆರೋಗ್ಯ, ಶಿಕ್ಷಣ, ಕುಡಿಯುವ ನೀರಿನ ಪೂರೈಕೆ ಇತ್ಯಾದಿ ಸಾರ್ವಜನಿಕ ಸೇವೆಗಳಿಗಾಗಿ ರಾಜ್ಯದ ಆದಾಯದಲ್ಲಿ ನೂರಕ್ಕೆ 30ರಷ್ಟು ವಿನಿಯೋಗವಾಗುವುದು. 1956ರಲ್ಲಿ ಕೇವಲ 207 ಆಸ್ಪತ್ರೆ ಹಾಗೂ ಔಷಧಾಲಯಗಳಿದ್ದವು. ಈಗ ಅವುಗಳ ಸಂಖ್ಯೆ 1500ಕ್ಕೆ ಏರಿದೆ.

ಕರ್ನಾಟಕ ರಾಜ್ಯವು ಇತ್ತೀಚಿನ ವರುಷಗಳಲ್ಲಿ ಅಭಿವೃದ್ಧಿಗೆ ನೆರವಾಗಬಲ್ಲ ಅನೇಕ ಆರ್ಥಿಕ ಸಂಸ್ಥೆಗಳನ್ನು ರಚಿಸಿದೆ. ಅಗತ್ಯವಾದ ಹಣಕಾಸನ್ನಲ್ಲದೆ ಆಡಳಿತ ಮತ್ತು ಸಿಬ್ಬಂದಿಯನ್ನು ಒದಗಿಸುವುದಕ್ಕೂ ಅಂತರರಾಷ್ಟ್ರೀಯ ಹಣಕಾಸಿನ ಸಂಸ್ಥೆಗಳಿಂದ ಬೃಹದ್ ಯೋಜನೆಗಳಿಗೆ ನೆರವನ್ನು ಪಡೆಯುವುದಕ್ಕೂ ಈ ಸಂಸ್ಥೆಗಳಿಂದ ತುಂಬಾ ಅನುಕೂಲವಾಗಿದೆ. ಹಣಕಾಸಿನ ಕಾರ್ಪೊರೇಷನ್, ಉದ್ದಿಮೆ ಅಭಿವೃದ್ಧಿ ಕಾರ್ಪೊರೇಷನ್ ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದು. ಕ್ಷೀರ ಅಭಿವೃದ್ಧಿ ಯೋಜನೆ ಮುಂತಾದವುಗಳಿಗೆ ನೂರಾರು ಕೋಟಿ ರೂ. ನೆರವು ದೊರೆವಂತಾಗಿದೆ.

ಬಡತನ ನಿವಾರಣೆಯ ಕೆಳಗಿನ ಜನರಿಗೂ ಸಾಧನೆಯ ಲಾಭ ದೊರೆಯಬೇಕಾದರೆ ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನಗಳು ಉತ್ತಮಗೊಳ್ಳಬೇಕು. ಈ ದಿಶೆಯಲ್ಲಿ ಪರಿಣಾಮಕಾರಿ ಹೆಜ್ಜೆ ಇಡಲಾಗಿದೆ. ಸ್ವಂತದ ನೆಲವೆಂಬುದು ಇಲ್ಲದ, ಭೂರಹಿತರಿಗೆ ಮನೆ ಕಟ್ಟಿಕೊಳ್ಳಲು ಉಚಿತವಾಗಿ ನಿವೇಶನ ಒದಗಿಸಲಾಗಿದೆ. ಈಗಾಗಲೆ 2,85,000 ನಿವೇಶನ ಹಂಚಲಾಗಿದೆ. ಇದರಲ್ಲಿ 90,520 ನಿವೇಶನಗಳನ್ನು ಪರಿಶಿಷ್ಟ ಜಾತಿ ಹಾಗೂ ಜನಾಂಗದವರಿಗೆ ಹಂಚಲಾಗಿದೆ. ಇನ್ನೂ 2,30,638 ನಿವೇಶನಗಳಿಗೆ ಅಗತ್ಯವಾದ ಹಣಕಾಸನ್ನು ಒದಗಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ಕೃಷಿಕ್ಷೇತ್ರದಲ್ಲಿ ನೂತನ ಅಧ್ಯಾಯವನ್ನು ಪ್ರಾರಂಭಿಸುವ ಭೂಸುಧಾರಣೆ ಕಾನೂನು ಜಾರಿಯಲ್ಲಿ ಬಂದಿದೆ. ಹಿಂದುಳಿದ ವರ್ಗಗಳ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಕೈಗೊಳ್ಳಲಾಗಿದೆ.

[ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಪ್ರಕಟಿತ.] —೦—

ಕರ್ನಾಟಕದಲ್ಲಿ ವಿವಿಧ ಯೋಜನೆಗಳ ಪ್ರಗತಿ

ಬಡವರ ಭಾಗ್ಯದೇವತೆ:

ಕನಿಷ್ಠ ಆವಶ್ಯಕತೆಗಳ ಕಾರ್ಯಕ್ರಮ

ಭಾರತದ ಜೀವನಾಡಿ ಮಿಡಿಯುತ್ತಿರುವುದು ಹಳ್ಳಿಗಳಲ್ಲಿ. ಹಳ್ಳಿಯ ಜನರ ಜೀವನ ಉತ್ತಮಗೊಂಡರೆ ದೇಶ ಉದ್ಧಾರವಾದಂತೆ.

ಆರ್ಥಿಕ ಅಭಿವೃದ್ಧಿಯ ಮೂಲಕ ಬಡತನ ನಿವಾರಣೆ ಮಾಡುವುದು ಪಂಚವಾರ್ಷಿಕ ಯೋಜನೆಗಳ ಮುಖ್ಯ ಉದ್ದೇಶ. ಐದನೇ ಯೋಜನೆಯಲ್ಲಂತೂ ಈ ಉದ್ದೇಶದ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾಜಿಕ ಜೀವನವನ್ನು ಸುಧಾರಿಸುವ ವಿಶೇಷ ಪ್ರಯತ್ನಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕನಿಷ್ಟ ಅವಶ್ಯಕತೆಗಳ ಕಾರ್ಯಕ್ರಮ ಈ ದಿಶೆಯಲ್ಲೊಂದು ದೊಡ್ಡ ಪ್ರಯತ್ನ.

ಗ್ರಾಮಾಂತರ ಪ್ರದೇಶಗಳಲ್ಲಿ ಸುಧಾರಿತ ಜೀವನಕ್ಕೆ ಹಾಗೂ ಅಭಿವೃದ್ಧಿಗೆ ಕೆಲವೊಂದು ಸಾಮಾಜಿಕ ಸೌಲಭ್ಯಗಳನ್ನು ಕನಿಷ್ಟ ಅವಶ್ಯಕತೆಗಳ ಕಾರ್ಯಕ್ರಮದಿಂದ ಒದಗಿಸಲಾಗುವುದು.

ಕನಿಷ್ಟ ಅವಶ್ಯಕತೆಗಳ ಕಾರ್ಯಕ್ರಮದಲ್ಲಿ ಹಲವೊಂದು ನಿರ್ದಿಷ್ಟ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಇವುಗಳಲ್ಲಿ ಪ್ರಮುಖವಾದುವುಗಳೆಂದರೆ: ಪ್ರಾಥಮಿಕ ವಿದ್ಯಾಭ್ಯಾಸ, ಸಾರ್ವಜನಿಕ ಆರೋಗ್ಯ, ಮಕ್ಕಳಿಗೆ ಪೌಷ್ಟಿಕ ಆಹಾರ, ಗ್ರಾಮಗಳಿಗೆ ಕುಡಿಯುವ ನೀರು, ಭೂರಹಿತ ಗ್ರಾಮಸ್ಥರಿಗೆ ಮನೆಗಳಿಗಾಗಿ ನಿವೇಶನಗಳು, ಗ್ರಾಮಾಂತರ ರಸ್ತೆಗಳು, ಗ್ರಾಮಗಳಿಗೆ ವಿದ್ಯುತ್‌ಶಕ್ತಿ ಹಾಗೂ ದೊಡ್ಡ ನಗರಗಳಲ್ಲಿರುವ ಕೊಳಚೆ ಪ್ರದೇಶಗಳ ನೈರ್ಮಲ್ಯ.

ಇವೆಲ್ಲ ಕ್ಷೇತ್ರಗಳಲ್ಲಿ ಕೆಲವೊಂದು ಕಾರಣಗಳಿಂದ, ಮುಖ್ಯವಾಗಿ ಆರ್ಥಿಕ ಕಾರಣದಿಂದ, ಗಣನೀಯ ಪ್ರಗತಿ ಸಾಧಿಸಲು ಸಾಧ್ಯವಾಗಿರಲಿಲ್ಲ. ಇದೀಗ ಐದನೇ ಯೋಜನೆಯ ಕಾಲದಲ್ಲೇ ಈ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಬೇಕೆಂಬುದಾಗಿ ನಿರ್ಧಾರಮಾಡಲಾಗಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಈ ಬಗ್ಗೆ ಸುಮಾರು 3300 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ.

ಕರ್ನಾಟಕದಲ್ಲಿ ಕನಿಷ್ಟ ಅವಶ್ಯಕತೆಗಳ ಕಾರ್ಯಕ್ರಮಕ್ಕೆ ಐದನೇ ಯೋಜನೆಯಲ್ಲಿ 160·60 ಕೋಟಿ ರೂಪಾಯಿಗಳನ್ನು ಮೀಸಲಾಗಿಡಲಾಗಿದೆ.

— —

ಹನ್ನೊಂದು ಲಕ್ಷ ಮಕ್ಕಳು ಶಾಲೆಗೆ ಹೋಗುತ್ತಿಲ್ಲ

5ನೇ ಯೋಜನೆಯಲ್ಲಿ 2000 ಹೊಸ ಪ್ರಾಥಮಿಕ ಶಾಲೆಗಳು

"ಹದಿನಾಲ್ಕರ ಹರೆಯದೊಳಗಿನ ಎಲ್ಲಾ ಮಕ್ಕಳಿಗೆ ಉಚಿತವಾಗಿ ಹಾಗೂ ಕಡ್ಡಾಯವಾಗಿ ವಿದ್ಯಾಭ್ಯಾಸ."

ನಮ್ಮ ರಾಜ್ಯಘಟನೆಯಲ್ಲಿರುವ ನಿರ್ದೇಶಕ ಸೂತ್ರವಿದು. ಆದರೆ ಇತರ ಎಲ್ಲಾ ರಾಜ್ಯಗಳಂತೆ ಕರ್ನಾಟಕದಲ್ಲೂ ಶಾಲೆಗೆ ಹೋಗಬೇಕಾದ ಎಲ್ಲಾ ಮಕ್ಕಳು ಶಾಲೆಗಳಿಗೆ ಹೋಗುತ್ತಿಲ್ಲ. ನೂರಕ್ಕೆ ಹತ್ತು ಮಕ್ಕಳು ಪ್ರಾಥಮಿಕ ಶಾಲೆಗಳ ಮೆಟ್ಟಲು ಹತ್ತಿಲ್ಲ. ನೂರಕ್ಕೆ ಅರುವತ್ತು ಮಕ್ಕಳು ಮಾಧ್ಯಮಿಕ ಶಾಲೆಗಳ ಹೊಸಲು ದಾಟಿಲ್ಲ.

ಕಾರಣ? ಹಲವರಿಗೆ, ತಮ್ಮ ಮಕ್ಕಳು ಶಾಲೆಗೆ ಹೋದರೆ ಮನೆಗೆಲಸಕ್ಕೆ ಏನು ದಾರಿ?—ಎಂಬ ಸಮಸ್ಯೆ.

ಕರ್ನಾಟಕದಲ್ಲಿ ಈಗಾಗಲೇ 33,000 ಪ್ರಾಥಮಿಕ ಶಾಲೆಗಳಿವೆ. ಪ್ರತಿ ಗ್ರಾಮದ ಒಂದೂವರೆ ಕಿಲೋಮೀಟರ್ ಫಾಸಲೆಯಲ್ಲಿ ಒಂದರಂತೆ. ಒಟ್ಟು 41 ಲಕ್ಷ ಮಕ್ಕಳು ಸದ್ಯ ಈ ಶಾಲೆಗಳಿಗೆ ಹೋಗುತ್ತಿದ್ದಾರೆ. ಆದರೆ ಶಾಲೆಗೆ ಹೋಗದಿರುವ ಸುಮಾರು 11 ಲಕ್ಷ ಮಕ್ಕಳು ಇಲ್ಲಿದ್ದಾರೆ.

ನೂರಕ್ಕೆ ನೂರು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಹೋಗುವಂತಾಗಬೇಕು.

ಇದು ಐದನೇ ಪಂಚವಾರ್ಷಿಕ ಯೋಜನೆಯ ಗುರಿ. ಕನಿಷ್ಟ ಅವಶ್ಯಕತೆಯ ಕಾರ್ಯಕ್ರಮದ ಮುಖ್ಯ ಉದ್ದೇಶವೂ ಹೌದು.

ಅಂತೆಯೇ ಮಾಧ್ಯಮಿಕ ಶಾಲೆಗಳಿಗೆ ಹೋಗುವ ಮಕ್ಕಳ ಪ್ರಮಾಣ ನೂರಕ್ಕೆ ಐವತ್ತರಷ್ಟು ಹೆಚ್ಚಾಗುವ ಗುರಿಯೂ ಇದೆ.

ವಿದ್ಯಾಭ್ಯಾಸ ಕ್ಷೇತ್ರದಲ್ಲಿ ನಡೆಯುವ ತುರ್ತು ಕಾರ್ಯಕ್ರಮಗಳಿಂದಾಗಿ ಐದನೇ ಯೋಜನೆಯ ಕಾಲದಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುವ ಮಕ್ಕಳ ಸಂಖ್ಯೆ 41·31 ಲಕ್ಷಗಳಿಂದ 46·56 ಲಕ್ಷಗಳಿಗೂ, ಮಾಧ್ಯಮಿಕ ಶಾಲೆಗಳಿಗೆ ಹೋಗುವ ಮಕ್ಕಳ ಸಂಖ್ಯೆ 9·4 ಲಕ್ಷಗಳಿಂದ 14·6 ಲಕ್ಷಗಳಿಗೂ ಏರಲಿದೆ.

ದಿನವೆಲ್ಲ ಶಾಲೆಗೆ ಹೋಗಲಾಗದ ಮಕ್ಕಳಿಗೆ ಬಿಡುಸಮಯದಲ್ಲಿ ಪ್ರಾಥಮಿಕ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗುವುದು.

ಈ ಅವಧಿಯಲ್ಲಿ ಸುಮಾರು 2000 ಹೊಸ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗುವುದು, ಸುಮಾರು 20,000 ಅಧ್ಯಾಪಕರನ್ನು ಹೊಸತಾಗಿ ನೇಮಿಸಲಾಗುವುದು.

ಬಡ ಹಾಗೂ ಹಿಂದುಳಿದ ಜನಗಳ ಮಕ್ಕಳನ್ನು ಶಾಲೆಗೆ ಆಕರ್ಷಿಸಲೆಂದು ಉಚಿತ ಪುಸ್ತಕಗಳು, ಸಮವಸ್ತ್ರಗಳು ಹಾಗೂ ಮಧ್ಯಾಹ್ನದ ಉಪಾಹಾರವನ್ನು ಕೊಡಲಾಗುವುದು.

ಇವೆಲ್ಲ ಕ್ರಮಗಳಿಗೆ ವೆಚ್ಚವಾಗುವ ಹಣ 17·2 ಕೋಟಿ ರೂಪಾಯಿಗಳು.

— —

ಸಾಮಾನ್ಯ ಜನತೆಗೆ ಸಾಮಾಜಿಕ ಸ್ವಾಸ್ಥ್ಯ

ರೋಗ ಅಥವಾ ದುರ್ಬಲತೆ ಇಲ್ಲವೆನ್ನಿ. ಅಂಥ ವ್ಯಕ್ತಿ ಆರೋಗ್ಯವಂತ ಎನ್ನಲಾಗದು. ಒಬ್ಬ ವ್ಯಕ್ತಿ ಸಂಪೂರ್ಣವಾಗಿ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯ ಹೊಂದಿದ್ದರೆ ಮಾತ್ರ ಆತ ಆರೋಗ್ಯವಂತ. ಆರೋಗ್ಯ ಎಂದರೆ ಏನು ಎಂಬ ಪ್ರಶ್ನೆಗೆ ಜಾಗತಿಕ ಆರೋಗ್ಯ ಸಂಸ್ಥೆಯವರು ಕೊಟ್ಟ ಉತ್ತರ ಇದು.

ಅಂದಮೇಲೆ ಆರೋಗ್ಯ ಸೇವೆ ಎಂದರೆ ರೋಗ ಪರಿಹಾರ ಮಾತ್ರವಲ್ಲ. ರೋಗ ಪ್ರತಿಬಂಧಕ ಕೂಡ. "ಸಾಮಾಜಿಕ ಸ್ವಾಸ್ಥ್ಯ"ವನ್ನು ಬೆಳೆಸುವುದೂ ಅದಕ್ಕೆ ಸೇರಿದ್ದು.

ಇದೀಗ ಕರ್ನಾಟಕದ ಹಳ್ಳಿಗಳಲ್ಲಿ ಪ್ರತಿ 5000 ಜನರಿಗೊಂದರಂತೆ ಆಸ್ಪತ್ರೆಗಳಲ್ಲಿ ಹಾಸಿಗೆಗಳಿವೆ. ಪಟ್ಟಣಗಳಲ್ಲಿ ಪ್ರತಿ 800 ಮಂದಿಗೊಂದು ಹಾಸಿಗೆ.

ಇಷ್ಟೊಂದು ಅಗಾಧ ವ್ಯತ್ಯಾಸ ಇರಕೂಡದು. ಸರಿಪಡಿಸಬೇಕು.

ದಾದಿಯರ ಸಂಖ್ಯೆಯನ್ನು ನೋಡಿ. ಸದ್ಯ ನಮ್ಮ ಆಸ್ಪತ್ರೆಗಳಲ್ಲಿರುವ ಪ್ರತಿ 10 ಹಾಸಿಗೆಗೊಬ್ಬರಂತೆ ದಾದಿಯರಿದ್ದಾರೆ. ಇದು ಐದಕ್ಕೊಂದರಂತೆ ಹೆಚ್ಚಬೇಕಾಗಿದೆ.

ಕರ್ನಾಟಕದಲ್ಲಿ ಒಟ್ಟು 195 ಆಸ್ಪತ್ರೆಗಳಿವೆ. 791 ಚಿಕಿತ್ಸಾಲಯಗಳಿವೆ. ಇವುಗಳಲ್ಲಿ 265 ಪ್ರಾಥಮಿಕ ಆರೋಗ್ಯ ಕೇಂದ್ರಗಳು. 1152 ಉಪಕೇಂದ್ರಗಳೂ ಇವೆ.

ಬೆಳೆಯುತ್ತಿರುವ ಜನಸಂಖ್ಯೆಗೆ ಇದು ಸಾಲದು. ಅದಕ್ಕೆಂದೇ ಐದನೆಯ ಯೋಜನೆಯಲ್ಲಿ ಮೂರು ಪ್ರಾಥಮಿಕ ಕೇಂದ್ರಗಳನ್ನೂ 246 ಉಪಕೇಂದ್ರಗಳನ್ನೂ ಸ್ಥಾಪಿಸಲಾಗುವುದೆಂದು ತಿಳಿಯಲಾಗಿದೆ.

— —

ಕರ್ನಾಟಕದಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ

ನಮ್ಮ ಹೆಚ್ಚಿನ ರೋಗಗಳಿಗೆ ಪೌಷ್ಟಿಕ ಆಹಾರದ ಕೊರತೆಯೇ ಮೂಲ ಕಾರಣ. ಸಣ್ಣ ಮಕ್ಕಳ ಬೆಳವಣಿಗೆಗೆ ಪೌಷ್ಟಿಕ ಆಹಾರ ಅತಿ ಮುಖ್ಯ.

ಆದರೆ ಬಡವರ ಮಕ್ಕಳಿಗೆ ಆಹಾರವೇ ಸಾಕಷ್ಟು ಪ್ರಮಾಣದಲ್ಲಿ ದೊರೆಯದೆ ಇರುವಾಗ ಪೌಷ್ಟಿಕ ಆಹಾರದ ಪ್ರಶ್ನೆ ಎಲ್ಲಿದೆ?

ಕರ್ನಾಟಕದಲ್ಲಿ ಒಂದರಿಂದ ಐದು ವರ್ಷದೊಳಗಿನ ಮಕ್ಕಳು ಸುಮಾರು 42 ಲಕ್ಷ ಇದ್ದಾರೆ. ಶಾಲೆಗೆ ಹೋಗುವ ಮಕ್ಕಳು ಸುಮಾರು 75 ಲಕ್ಷ. ಇವರಲ್ಲಿ ನಾಲ್ಕನೇ ಒಂದಂಶ ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದ ನರಳುತ್ತಿದ್ದಾರೆ.

ಇಂಥವರಿಗೆ ಪೌಷ್ಟಿಕ ಆಹಾರ ಒದಗಿಸಲು ಈಗಾಗಲೇ ಅಲ್ಪಪ್ರಮಾಣದ ಕಾರ್ಯಕ್ರಮ ಉಂಟು. ಶಿಶುವಿಹಾರಗಳಿಗೆ ಮತ್ತು ಪ್ರಾಥಮಿಕ ಶಾಲೆಗಳಿಗೆ ಬರುವ ಕೆಲವೊಂದು ಭಾಗದ ಮಕ್ಕಳಿಗೆ ಮಧ್ಯಾಹ್ನ ಉಪಾಹಾರದ ಮೂಲಕ ಪೌಷ್ಟಿಕ ಆಹಾರ ಕೊಡಲಾಗುತ್ತಿದೆ. ಕೆಲವು ಅನ್ನಾಂಗಗಳ ಕೊರತೆ ಇರುವ ಮಕ್ಕಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಕೊಡಲಾಗುತ್ತಿದೆ.

ಆದರೆ ಇಷ್ಟುಕಾಲ ರಾಜ್ಯದ ಸ್ವಲ್ಪಾಂಶ ಮಕ್ಕಳಿಗೆ ಮಾತ್ರ ಈ ಸೌಲಭ್ಯ ದೊರೆಯುತ್ತಿತ್ತು.

ಇದೀಗ ಮುಖ್ಯವಾಗಿ ಬಡವರ ಮತ್ತು ಹಿಂದುಳಿದ ವರ್ಗದ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲು 29 ಕೋಟಿ ರೂಪಾಯಿ ವೆಚ್ಚದಲ್ಲಿ ಒಂದು ಬೃಹತ್ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದರಿಂದ ಆರು ವರ್ಷದೊಳಗಿನ ನಾಲ್ಕೂವರೆ ಲಕ್ಷ ಮಕ್ಕಳಿಗೆ ಶಿಶುವಿಹಾರ ಮತ್ತು ಬಾಲವಾಡಿಗಳಲ್ಲಿ ಪೌಷ್ಟಿಕ ಆಹಾರ ಕೊಡಲಾಗುವುದು. ಶಾಲೆಗೆ ಹೋಗುವ 12 ಲಕ್ಷ ಮಕ್ಕಳಿಗೆ ಶಾಲೆಗಳಲ್ಲಿ ಮಧ್ಯಾಹ್ನದ ಉಪಾಹಾರ ಕೊಡಲಾಗುವುದು. 75 ಲಕ್ಷ ಮಕ್ಕಳಿಗೆ ಆಸ್ಪತ್ರೆಗಳಲ್ಲಿ ಅನ್ನಾಂಗಗಳ ಕೊರತೆ ನಿವಾರಿಸಲು ಔಷಧಿ ನೀಡಲಾಗುವುದು.

ರಾಜ್ಯದ ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಿಗೆ ಪೂರಕ ಆಹಾರ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದು. ಶಾಲಾಪೂರ್ವ ವಯಸ್ಸಿನ 42 ಲಕ್ಷ ಮಕ್ಕಳಿಗೆ ಹಾಗೂ 15 ಲಕ್ಷ ಗರ್ಭಿಣಿಯರು ಮತ್ತು ತಾಯಂದಿರಿಗೆ ಪೌಷ್ಟಿಕ ಆಹಾರದ ಕೊರತೆಯಿಂದ ರಕ್ಷಣೆ ನೀಡಲಾಗುವುದು. ಒಂದರಿಂದ ಏಳನೇ ತರಗತಿಗಳ ವರೆಗೆ ಕಲಿಯುತ್ತಿರುವವರಲ್ಲಿ ಅರ್ಧಾಂಶ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರ ಲಭಿಸುವಂತೆ ಮಾಡಲಾಗುವುದು.

ಇವೆಲ್ಲ ಕೆಲಸಗಳಿಗೆ ಆಗುವ ಒಟ್ಟು ವೆಚ್ಚ 148 ಕೋಟಿ ರೂಪಾಯಿ. ಎಂತಲೇ ಇದು ಐದನೇ ಯೋಜನೆಯ ಮುಖ್ಯ ಕೆಲಸಗಳಲ್ಲಿ ಒಂದು.

— —

ಭೂವಿವಾದಗಳ ತನಿಖೆಗೆ ಕಚೇರಿ

ಭೂಶಾಸನ ಕಾಯಿದೆಯನ್ವಯ ದೂರುಗಳ ತನಿಖೆಯ ಸಲುವಾಗಿ ದ. ಕ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪ್ರತ್ಯೇಕ ವಿಭಾಗವೊಂದನ್ನು ಆರಂಭಿಸಲಾಗಿದೆ. ಯಾವುದೇ ದೂರುಗಳ ವ್ಯವಹಾರಗಳ ಬಗ್ಗೆ ಶ್ರೀ ಗಂಗಾಧರರಾವ್, ಸುಪರಿಂಟೆಂಡೆಂಟ್ ರೆವಿನ್ಯೂ ಸೆಕ್ಷನ್, ಜಿಲ್ಲಾಧಿಕಾರಿಗಳ ಕಚೇರಿ ಅಥವಾ ಫೋನ್ 3519ರ ಸಂಪರ್ಕ ನಡೆಸಬಹುದೆಂದು ಜಿಲ್ಲಾಧಿಕಾರಿಗಳು ಹೊರಡಿಸಿದ ಪ್ರಕಟಣೆಯೊಂದು ತಿಳಿಸಿರುವುದು.

—o—

ಕರ್ನಾಟಕದಲ್ಲಿ ಗೃಹನಿರ್ಮಾಣ ಯೋಜನೆಯ ಯತ್ನ

ವಿಸ್ತಾರವಾದ ಪ್ರದೇಶ. ಹಂಪಾದ ಹಸಿರು ಬಯಲುಗಳಲ್ಲಿ ಮೇಯುತ್ತಿರುವ ದನಕರುಗಳು. ಹೊಲಗಳಲ್ಲಿ ದುಡಿಯುತ್ತಿರುವ ಜನ.

ಇದು ನಮ್ಮ ಎಲ್ಲಾ ಹಳ್ಳಿಗಳ ಕಥೆ. ವ್ಯಥೆ ಕೂಡಾ.

ವ್ಯಥೆ?

ಹೌದು. ಕರ್ನಾಟಕದ 26,853 ಗ್ರಾಮಗಳಲ್ಲಿರುವ ಸುಮಾರು 17 ಲಕ್ಷ ಬಡ ಕೆಲಸಗಾರರಿಗೆ ಸಂಬಂಧಪಟ್ಟ ವ್ಯಥೆ ಅದು.

ಹಳ್ಳಿಗಳಲ್ಲೇನೋ ವಿಸ್ತಾರವಾದ ಪ್ರದೇಶವಿದೆ ನಿಜ. ಆದರೆ ಇಷ್ಟೊಂದು ಜನಕ್ಕೆ ಸ್ವಂತ ಮನೆಯಿಲ್ಲ. ಮನೆ ಕಟ್ಟಿಕೊಳ್ಳಲು ತಮ್ಮದೇ ಆದ ಜಾಗವೂ ಇಲ್ಲ. ಬಾಡಿಗೆ ಮನೆಗಳಲ್ಲಿ, ಗುಡಿಸಲು, ಜೋಪಡಿಗಳಲ್ಲಿ ಇವರ ವಾಸ. ಮನೆ ಖಾಲಿ ಮಾಡಲು ಯಜಮಾನರುಗಳಿಂದ ಯಾವ ಹೊತ್ತಿನಲ್ಲೂ ಆದೇಶಬರುವುದೆಂಬ ಭೀತಿಯ ನೆರಳಲ್ಲಿ ಬದುಕು.

ಇಂಥ ಜನಕ್ಕೆ ನಿವೇಶನಗಳನ್ನು ನೀಡುವ ನಿರ್ಧಾರವನ್ನು ಕರ್ನಾಟಕ ಸರ್ಕಾರ ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಕೈಗೊಂಡಿತು. ಅಂದಿನಿಂದ ಇಂದಿನವರೆಗೆ ನಾಲ್ಕೂವರೆ ಲಕ್ಷಗಳಷ್ಟು ನಿವೇಶನಗಳನ್ನು ಬಡವರಿಗೆ ಉಚಿತವಾಗಿ ಹಂಚಲಾಗಿದೆ.

ಪ್ರತಿ ನಿವೇಶನದ ವಿಸ್ತಾರ ಸುಮಾರು 150 ಚದರ ಗಜ. ಸರ್ಕಾರಿ ಜಮೀನಿನಲ್ಲಿ, ದಾನವಾಗಿ ಬಂದ ಭೂಮಿಯಲ್ಲಿ ಇಲ್ಲವೆ ಸ್ವಾಧೀನಪಡಿಸಿಕೊಂಡ ಜಾಗಗಳಲ್ಲಿ ಇಂತಹ ನಿವೇಶನಗಳನ್ನು, ಸಿದ್ಧಪಡಿಸಲಾಗುತ್ತಿದೆ. ಒಂದೊಂದು ನಿವೇಶನಕ್ಕೂ ಸುಮಾರು 200 ರೂಪಾಯಿ ವೆಚ್ಚ. ಇದನ್ನು ಸರ್ಕಾರವೇ ವಹಿಸಿಕೊಳ್ಳುತ್ತಿದೆ.

ರಾಜ್ಯದಲ್ಲಿ ಇನ್ನೂ ಐದು ಲಕ್ಷ ಬಡ ಕುಟುಂಬಗಳಿಗೆ ಮನೆ ಕಟ್ಟಿಕೊಳ್ಳಲು ನಿವೇಶನಗಳ ಅಗತ್ಯವಿದೆ.

ಇವರಲ್ಲಿ ಹಿಂದುಳಿದ ವರ್ಗದವರಿದ್ದಾರೆ, ಪರಿಶಿಷ್ಟ ವರ್ಗದವರಿದ್ದಾರೆ, ಗಿರಿಜನರೂ ಇದ್ದಾರೆ. ಇಂತಹ ದುರ್ಬಲರ ಮಟ್ಟಿಗಂತೂ ಈಗಾಗಲೇ ಸಣ್ಣ ಪುಟ್ಟ ಜಮೀನು ಹೊಂದಿದವರಿಗೂ ಹೊಸ ನಿವೇಶಗಳನ್ನು ನೀಡುವ ನಿರ್ಧಾರ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಜನತಾ ಗೃಹನಿರ್ಮಾಣ ಯೋಜನೆಯೊಂದನ್ನು 1973–74ನೇ ವರ್ಷದಲ್ಲಿ ಆರಂಭಿಸಲಾಯಿತು. ಮನೆಯೊಂದಕ್ಕೆ ರೂ. 2500 ವೆಚ್ಚದಲ್ಲಿ ಪ್ರತಿಯೊಂದು ತಾಲೂಕಿನಲ್ಲಿ 280 ಮನೆಗಳನ್ನು ನಿರ್ಮಿಸುವುದು ಈ ಯೋಜನೆಯ ಗುರಿಯಾಗಿತ್ತು. ಕಳೆದ ಆರ್ಥಿಕ ವರ್ಷಾಂತ್ಯದಲ್ಲಿ ರಾಜ್ಯದಾದ್ಯಂತ 14508 ಮನೆಗಳು ನಿರ್ಮಾಣದ ವಿವಿಧ ಹಂತದಲ್ಲಿದ್ದವು.

ರಾಜ್ಯದ ವಿವಿಧ ಗೃಹನಿರ್ಮಾಣ ಯೋಜನೆಗಳಿಗೆ 1974–75ನೇ ವರ್ಷಕ್ಕೆ ಸುಮಾರು ಐದೂವರೆ ಕೋಟಿ ರೂಪಾಯಿಗಳನ್ನು ನಿಗದಿಮಾಡಲಾಗಿದೆ.

— —

ಹಳ್ಳಿಗಳ ಎಲ್ಲರಿಗೂ ಕುಡಿಯುವ ನೀರು

ಕರ್ನಾಟಕದ ಒಟ್ಟು 26,853 ಹಳ್ಳಿಗಳಲ್ಲಿ ಮೂರನೇ ಒಂದಂಶ ಹಳ್ಳಿಗಳ ಜನರಿಗೆ ಕುಡಿಯುವ ಶುದ್ಧ ನೀರಿನ ಅಭಾವವಿದೆ. ಇವರಲ್ಲಿ 6334 ಗ್ರಾಮಗಳ ಮಟ್ಟಿಗಂತೂ ನೀರಿನ ತೊಂದರೆ ವಿಪರೀತ.

ಪ್ರತಿ ಹಳ್ಳಿಗೂ ಕುಡಿಯುವ ಶುದ್ಧ ನೀರು ಪೂರೈಕೆಯಾಗುವಂತೆ ಮಾಡಬೇಕು. ಇದಕ್ಕಾಗಿ ಬೃಹತ್ ಯೋಜನೆಯೊಂದು ಸಿದ್ಧವಾಗಿದೆ. ಕೊಳವೆ ಬಾವಿ ಅಥವಾ ನಲ್ಲಿನೀರು ಒದಗಿಸುವ ಈ ಕಾರ್ಯಕ್ರಮದಿಂದ ಐದನೆಯ ಯೋಜನೆಯ ಅವಧಿಯಲ್ಲಿ ತೀವ್ರ ಕೊರತೆಯುಳ್ಳ ಎಲ್ಲಾ ಗ್ರಾಮಗಳಿಗೂ ಶುದ್ಧನೀರಿನ ಪೂರೈಕೆಯಾಗಲಿದೆ.

ಈ ಅವಧಿಯಲ್ಲಿ ಕೈಪಂಪುಗಳಿರುವ ಕೊಳವೆ ಬಾವಿಗಳನ್ನು 5147 ಹಳ್ಳಿಗಳಲ್ಲಿ ನಿರ್ಮಿಸಲಾಗುವುದು. 1187 ಹಳ್ಳಿಗಳಿಗೆ ಮತ್ತು ಸಣ್ಣ ಪಟ್ಟಣಗಳಿಗೆ ನಲ್ಲಿನೀರು ಒದಗಿಸಲಾಗುವುದು.

ಇದಕ್ಕಾಗಿ ಒಟ್ಟು ವೆಚ್ಚ 34 ಕೋಟಿ ರೂಪಾಯಿ.

——

ಬಾಗಿಲು ತೆರೆದರೆ ಬೆಳಕು

ಎಷ್ಟೇ ಹಿಂದುಳಿದ ಹಳ್ಳಿಯಾಗಲಿ, ಅಲ್ಲಿ ಹೊಸ ಬದುಕು ಹೆಜ್ಜೆಯಿಡಬೇಕಾದರೆ, ನೇರವಾದ ರಸ್ತೆ ಸಂಪರ್ಕ ಅತ್ಯವಶ್ಯ. ರಸ್ತೆ ಗ್ರಾಮದ ಆರ್ಥಿಕ ಪ್ರಗತಿಗೆ ದಾರಿ. ಮನೋವಿಕಾಸಕ್ಕೆ ಮೂಲ. ರಸ್ತೆ ಸೌಕರ್ಯವಿದ್ದರೆ ಗ್ರಾಮಸ್ಥರು ತಮ್ಮ ಹಳ್ಳಿಗಳಿಂದ ಹೊರಬಂದು ಇತರ ಪ್ರದೇಶಗಳ ಸಂಪರ್ಕ ಹೊಂದಲು ಅನುಕೂಲ.

ಕರ್ನಾಟಕದ 6245 ಹಳ್ಳಿಗಳಿಗೆ ಇನ್ನೂ ನೇರ ರಸ್ತೆಸಂಪರ್ಕವಿಲ್ಲ. ಇಷ್ಟೊಂದು ಗ್ರಾಮಗಳಿಗೆ ರಸ್ತೆಗಳನ್ನು ಒದಗಿಸುವುದು ಆರ್ಥಿಕವಾಗಿ ದೈತ್ಯಾಕಾರದ ಕೆಲಸ. ಹಂತಹಂತವಾಗಿ ಪೂರೈಸಬೇಕಾದ ಕೆಲಸವೂ ಹೌದು.

ಮೊಟ್ಟಮೊದಲು ದೊಡ್ಡ ಗ್ರಾಮಗಳಿಗೆ, ಅಂದರೆ ಒಂದೂವರೆ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಹಳ್ಳಿಗಳಿಗೆ ಒಳ್ಳೆಯ ರಸ್ತೆ ವ್ಯವಸ್ಥೆ ಮಾಡುವುದು ಐದನೇ ಯೋಜನೆಯ ಗುರಿ.

ಇದರಂತೆ ಒಟ್ಟು 501 ಗ್ರಾಮಗಳಿಗೆ ಹತ್ತುಕೋಟಿ ರೂಪಾಯಿ ವೆಚ್ಚದಲ್ಲಿ ನೇರ ರಸ್ತೆ ಒದಗಿಸುವ ವ್ಯವಸ್ಥೆ ಮಾಡಲಾಗುವುದು. ಅಂದರೆ ಇದಕ್ಕಾಗಿ ಸುಮಾರು 3000 ಕಿಲೋಮೀಟರ್ ಉದ್ದದಷ್ಟು ಹೊಸ ರಸ್ತೆ ನಿರ್ಮಾಣಮಾಡಬೇಕಾಗುವುದು.

ಹಳ್ಳಿಗಳಲ್ಲಿ ಹೊಸ ಬೆಳಕು

ರಸ್ತೆಯಂತೆ ವಿದ್ಯುತ್ ಶಕ್ತಿಯೂ ಆರ್ಥಿಕ ಹಾಗೂ ಔದ್ಯಮಿಕ ಪ್ರಗತಿಗೆ ಚೇತಕ. ಮನೆಗಳಲ್ಲಿ ವಿದ್ಯುತ್ ಇದ್ದರೆ ಮನವೂ ಬೆಳಗುವುದೆಂದು ಬಲ್ಲವರು ಹೇಳುತ್ತಾರೆ.

ರಾಜ್ಯದ 17,500 ಗ್ರಾಮಗಳಿಗೆ ಈಗಾಗಲೇ ವಿದ್ಯುತ್ ಶಕ್ತಿ ದೊರಕಿದೆ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ಶೇಕಡಾ 67 ಮಂದಿಗೆ ಅನುಕೂಲವಾಗಿದೆ.

ಐದನೇ ಯೋಜನೆಯಲ್ಲಿ ರಾಜ್ಯದ ಎಲ್ಲಾ ಹಳ್ಳಿಗಳಿಗೂ ವಿದ್ಯುತ್‌ಶಕ್ತಿ ಒದಗಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ. ಇದಕ್ಕೆ ತಗಲುವ ಒಟ್ಟು ವೆಚ್ಚ 21 ಕೋಟಿ ರೂಪಾಯಿ.

ಗ್ರಾಮೀಣ ಪ್ರದೇಶಗಳಲ್ಲಿರುವ ಶೇಕಡಾ 40 ಅಂಶ ಜನತೆಗಾದರೂ ವಿದ್ಯುತ್ ಶಕ್ತಿ ದೊರೆಯುವಂತೆ ಮಾಡುವುದು ಯೋಜನೆಯ ಉದ್ದೇಶ.

ಕೊಳಚೆ ಪ್ರದೇಶಗಳ ಕತ್ತಲು

ಗ್ರಾಮೀಣ ಪ್ರದೇಶಗಳ ಕತ್ತಲನ್ನು ಓಡಿಸಲು ವಿದ್ಯುತ್ ಶಕ್ತಿಯೊಂದೇ ಸಾಕಾದರೂ ಆಗಬಹುದು. ಆದರೆ ನಗರ ಪ್ರದೇಶಗಳಲ್ಲಿರುವ ಕೊಳಚೆಗಳಿಂದ ಕತ್ತಲನ್ನೋಡಿಸಬೇಕಾದರೆ ಅದೊಂದೇ ಸಾಲದು.

ರಾಜ್ಯದ ದೊಡ್ಡ ನಗರಗಳಾದ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ–ಧಾರವಾಡ – ಇಲ್ಲಿ ಕೊಳಚೆ ಪ್ರದೇಶಗಳ ಸಮಸ್ಯೆ ದಿನೇ ದಿನೇ ಜಟಿಲವಾಗುತ್ತ ಬಂದಿದೆ. ಬೆಂಗಳೂರು ನಗರವೊಂದರಲ್ಲೇ 155 ಕೊಳಚೆ ಪ್ರದೇಶಗಳಿದ್ದು, ಇಲ್ಲಿ 29,257 ಕುಟುಂಬಗಳು ವಾಸವಾಗಿರುವುದಾಗಿ ತಿಳಿದುಬಂದಿದೆ.

ಇಂತಹ ಕೊಳಚೆ ಪ್ರದೇಶಗಳನ್ನು ಸಂಪೂರ್ಣ ನಿರ್ಮೂಲವಮಾಡಿ ಜನರಿಗೆ ಬೇರೆಕಡೆ ಪುನರ್ವಸತಿ ಮಾಡುವುದು ಸುಲಭಸಾಧ್ಯವಲ್ಲ. ಅದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುವುದು.

ಬೆಂಗಳೂರಿನಲ್ಲಿ ಈಗಾಗಲೇ 75 ಕೊಳಚೆ ಪ್ರದೇಶಗಳನ್ನು ಸುಧಾರಿಸಲಾಗುತ್ತಿದೆ.

ರಾಜ್ಯದ ಮೂರು ದೊಡ್ಡ ನಗರಗಳಲ್ಲಿ ಕೈಗೊಂಡಿರುವ ಕೊಳಚೆ ನೈರ್ಮಲ್ಯ ಹಾಗೂ ನಿರ್ಮೂಲನ ಕಾರ್ಯದಿಂದ ಸುಮಾರು ಮೂರು ಲಕ್ಷ ಜನರಿಗೆ ಪ್ರಯೋಜನವಾಗಲಿದೆ. ಒಟ್ಟು ವೆಚ್ಚ ನಾಲ್ಕೂವರೆ ಕೋಟಿ ರೂಪಾಯಿ.

——

ಶ್ರೀಮದ್ಭಗವದ್ಗೀತೆ

(ಕಳೆದ ತಾ. 18–8–74ನೇ ಸಂಚಿಕೆಯಿಂದ ಮುಂದುವರಿದುದು)

(ಮೂಲ ಸಂಸ್ಕೃತದಲ್ಲಿ ಮತ್ತು ತುಳುಭಾಷೆಯಲ್ಲಿ)

(ತುಳುಗೀತೆ ರಚಯಿತರು: ದಿ| ಮೂಲ್ಕಿ ನರಸಿಂಗರಾವ್, ಬಿ. ಎ., ಎಮ್. ಎಲ್.)

ಹದಿನೈದನೆಯ ಅಧ್ಯಾಯ—ಪುರುಷೋತ್ತಮಯೋಗ

ಸಂಸ್ಕೃತ

ನ ತದ್ಭಾಸಯತೇ ಸೂರ್ಯೋ ನ ಶಶಾಂಕೋ ನ ಪಾವಕಃ ।
ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ ॥ ೬ ॥

ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।
ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ॥ ೭ ॥

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥ ೮ ॥

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪಸೇವತೇ ॥ ೯ ॥

ಉತ್ಕ್ರಾಮಂತಂ ಸ್ಥಿತಂ ವಾಽಪಿ ಭುಂಜಾನಂ ವಾ ಗುಣಾನ್ವಿತಂ ।
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥ ೧೦ ॥

ಪದಿನೈನನೆ ಅಧ್ಯಾಯ—ಪುರುಷೋತ್ತಮ ಯೋಗೊ

ತುಳು

ಅಲ್ಪ ಕೊರಯೆರ್ ಸೂರ್ಯಚಂದ್ರೆರ್ ಅಗ್ನಿ ಏತ್ಲ ಪ್ರಕಾಶೊನು; ।
ಎನ್ನ ಪರಮಸ್ಥಾನ ಸೇರ್ದ್ವಿಜ್ಜಿ ರಡ್ಡನೆ ಬರ್ಪುನೂ ॥ ೬ ॥

ಎನ್ನ ಒಂಜಂಶನೇ ಲೋಕೊಟು ಜೀವಶಾಶ್ವತವಾತೆನೇ ।
ಪ್ರಕೃತಿಟ್ಟಿನ ಮನಸೆ ಜ್ಞಾನೇಂದ್ರಿಯೊಳೆ ಮಳ್ಪುಕರ್ಷಣೇ ॥ ೭ ॥

ಇಂಚ ಈಶ್ವರೆ ದೇಹ ಸೇರ್ನಗ ತ್ಯಜಿಪುನಾಗಲ, ಆಜನೇ* ।
ಪೂವೆ ಪತ್ತ್‌ದ್, ವಾಯು ಪರಿಮಳ ಕೊಂಡು ಪೋಪುನ ಲೆಕ್ಕನೇ ॥ ೮ ॥

ಸ್ಪರ್ಶ ಕಣ್ ಕೆಬಿ ಮೂಕು ನಾಲಿಗೆ ಮನಸ್‌ಟ್‌ಲಾ ಸ್ಥಾಪನೇ ।
ಅತ್ ಅನುಭವಿಪುವೇ ಆಯೆದೆ ಐಕುಳೆತ ವಿಷಯೋಳೆನೇ ॥ ೯ ॥

ಉಪ್ಪುನಾವೆನ್ ಪೋಪುನಾವೆನ್ ಆಯೆ ಅನುಭವಿಪುನವೆನ್ಇ ।
ಮೂಢೆ ತೂವಯೆ; ತೂಪೆರಿತರೆರ್ ಜ್ಞಾನದೃಷ್ಟಿಟ್ ಅವ್ವೆನ್ಇ ॥ ೧೦ ॥

* ಐನ್ ಜ್ಞಾನೇಂದ್ರಿಯೊಳು, ಒಂಜಿ ಮನಸ್ಸ್, ಇಂಚ ಆಜಿ.

(ಮುಂದುವರಿಯುವುದು)

ಸಣ್ಣ ಕತೆ.

ಅಜ್ಜಿಯ ಕೈ ಕಂಪಿಸುತ್ತವೆ

ನೀನಾಳದ್ದು ದೊಡ್ಡ ಪರಿವಾರ— ತಾಯಿ, ತಂದೆ, ಇಬ್ಬರು ಸೋದರರು, ಇಬ್ಬರು ಸೋದರಿಯರು ಅಲ್ಲದೆ ಅಜ್ಜಿಯೂ ಇರುವ ತುಂಬು ಪರಿವಾರವದು.

ನೀನಾ ಇನ್ನೂ ಪುಟ್ಟ ಬಾಲಿಕೆ. ಏಳು ವರ್ಷದ ಚಿಕ್ಕ ಮಗು. ಅಜ್ಜಿ ಎಲ್ಲರಿಗಿಂತ ದೊಡ್ಡವಳು. ಅವಳಿಗೆ ಎಂಭತ್ತೆಂಟು ವರ್ಷ. ಏನಾದರೂ ತಿನ್ನುವುದೆಂದರೆ ಆಯಿತು,–ಅವಳ ಕೈಗಳಿಗೆ ನಡುಕ. ಚಮಚೆಯಲ್ಲಿ ಅಜ್ಜಿ ಸಾರು ಸುರಿಯುವುದನ್ನು ನೋಡಬೇಕು; ಟೇಬಲ್ ತುಂಬೆಲ್ಲಾ ಅದೇ.

ಅಂದು ನೀನಾಳ ಹುಟ್ಟುಹಬ್ಬ. ತನ್ನ ಗೆಳತಿಯರನ್ನೂ ಆಮಂತ್ರಿಸುವಂತೆ ಅಮ್ಮ ನೀನಾಳಿಗೆ ತಿಳಿಸಿದಳು.

ಅತಿಥಿಗಳೂ ಬಂದರು. ಟೇಬಲ್ ಸಜ್ಜುಗೊಳಿಸುವುದರಲ್ಲಿ ಅಮ್ಮ ನಿರತಳಾಗಿದ್ದಳು. ಟೇಬಲ್ ಬಳಿ ಅಜ್ಜಿ ಕೂಡ ಕೂರಬಹುದಲ್ಲ ಎಂದು ನೀನಾಗೆ ಒಂದಿಷ್ಟು ಚಿಂತೆಯಾಯಿತು. ಕೂತರೆ ಕೂರಲಿ, ಆದರೆ ಅವಳ ಕೈ ನಡುಗುತ್ತವಲ್ಲ? ತನ್ನ ಗೆಳತಿಯರು ನಗಬಹುದು, ತನ್ನ ಅಜ್ಜಿಯ ಕೈ ನಡುಗುತ್ತವೆಂದು ಶಾಲೆಯಲ್ಲೆಲ್ಲ ಸುದ್ದಿ ಹಬ್ಬಿಸಿ ಅವರು ತನ್ನನ್ನು ಗೇಲಿ ಮಾಡಬಹುದು.........!

"ಅಮ್ಮ, ದಯವಿಟ್ಟು ಟೇಬಲ್ ಬಳಿ ಅಜ್ಜಿಗೆ ಬರಬೇಡ ಎಂದು ಹೇಳು!" ಮೆಲ್ಲಗೆ ಉಸುರಿದಳು ನೀನಾ ತನ್ನ ತಾಯಿಗೆ.

"ಯಾಕೆ?" ನೀನಾಳ ತಾಯಿ ಕೇಳಿದಳು. ಎಲ್ಲಿಲ್ಲದ ಆಶ್ಚರ್ಯ ಆಕೆಗೆ.

"ಅಜ್ಜಿಯ ಕೈ ನಡುಗುತ್ತವೆ, ಟೇಬಲ್ ಮೇಲೆಲ್ಲಾ ಸಾರು ಚೆಲ್ಲುತ್ತಾಳೆ."

ತಾಯಿಯ ಮುಖ ಪೆಚ್ಚಾಯಿತು. ತುಟಿ ಎರಡು ಮಾಡಲಿಲ್ಲ. ಮೌನವಾಗಿಯೇ ಟೇಬಲ್ ಮೇಲೆ ಅಲಂಕೃತವಾದ ಬಟ್ಟೆಯನ್ನು ತೆಗೆದು ಪುನಃ ಡ್ರಾವರಿನಲ್ಲಿಟ್ಟಳು. ಬಹು ಸಮಯ ಮೌನಳಾಗಿಯೇ ಇದ್ದು, ಕೊನೆಗೆ ಹೇಳಿದಳು:

"ಅಜ್ಜಿಗೆ ಇಂದು ಮೈ ಸರಿಯಿಲ್ಲ. ಇಂದು ಹುಟ್ಟುಹಬ್ಬದ ಊಟ ಬೇಡ. ನಿನಗೆ ಹುಟ್ಟುಹಬ್ಬದ ಶುಭವನ್ನು ಕೋರುತ್ತೇನೆ ನೀನಾ! ನೀನು ಮುಂದೆ ಒಳ್ಳೆ ಮನುಷ್ಯಳಾಗಬೇಕಮ್ಮ. ನಾನು ಹಾರೈಸುವುದು ಇದನ್ನೇ."

(ವಸಿಲಿ ಸುಖೋಮ್ಲಿನ್‌ಸ್ಕಿಯವರ ಒಂದು ಸಣ್ಣ ಕತೆ.)

—೦—

ಭಾರತದ ಹೊಸ ತಳಿಯ ಹತ್ತಿಗಳು

ವಿಶ್ವದಲ್ಲಿ ಹತ್ತಿ ಬೆಳೆಯುವ ದೇಶಗಳಲ್ಲೊಂದಾಗಿರುವ ಭಾರತ ಸುಮಾರು 80 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆದು ಪ್ರಥಮಸ್ಥಾನ ಪಡೆದಿದೆ. ಆದರೆ ಕಚ್ಚಾ ಹತ್ತಿಯ ಉತ್ಪಾದನೆಯಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಭಾರತ–ವರ್ಷಂಪ್ರತಿ ಆರರಿಂದ ಎಂಟು ಲಕ್ಷ ಬೇಲ್ ಹತ್ತಿ ಆಮದುಮಾಡಿಕೊಳ್ಳುತ್ತಿದೆ. ಇದರಲ್ಲಿ ಸುಮಾರು 3-4 ಲಕ್ಷ ಬೇಲ್ ಅತಿ ಉದ್ದ ಎಳೆಯ ಹತ್ತಿಯನ್ನು ಈಜಿಪ್ಟ್ ಮತ್ತು ಸೂಡಾನಿನಿಂದ ವರ್ಷಕ್ಕೆ 40 ಕೋಟಿ ರೂಪಾಯಿ ವೆಚ್ಚದಲ್ಲಿ ತರಿಸಿಕೊಳ್ಳಲಾಗುತ್ತಿದೆ. ಈ ವಿದೇಶೀ ಹತ್ತಿಗಳನ್ನು 100ರಿಂದ 120 ಕೌಂಟಿನ ನೂಲು ಪಡೆಯಲು ಉಪಯೋಗಿಸಲಾಗುತ್ತಿದೆ. ಈ ಹತ್ತಿಗಳನ್ನು ಇತರ ಕೃತಕ ನಾರಿನೊಂದಿಗೆ ಮಿಶ್ರಣಮಾಡಲಾಗುತ್ತದೆ.

ಕೊಯಮುತ್ತೂರಿನಲ್ಲಿರುವ ಹತ್ತಿ ಬೆಳೆಗಾರರು ಯಶಸ್ವಿಯಾಗಿ ಎದುರಿಸಿ ಎರಡು ಹೊಸ ತಳಿ ಹತ್ತಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಈ ಅತಿ ಉದ್ದ ಎಳೆ ಹತ್ತಿ ತಳಿಯು ವಿದೇಶೀ ಹತ್ತಿಯ ಆಮದಿಗೆ ಮಂಗಳ ಹಾಡಿ ಅಮೂಲ್ಯ ವಿದೇಶೀ ವಿನಿಮಯ ಪೋಲಾಗದಂತೆ ಉಳಿಸುತ್ತದೆ.

—೦—

ಕಸದ ಕುಪ್ಪೆಯಡಿಯಲ್ಲಿ ಲಕ್ಷಾಂತರ ಮೌಲ್ಯದ ದಸ್ತಾವೇಜುಗಳು

ಪ್ರಸ್ತುತ ತಿರುವನಂತಪುರ ಜೈಲಿನಲ್ಲಿ ಸ್ಥಾನಬದ್ಧತೆಯಲ್ಲಿರುವ ಸೂಫಿ ಇಬ್ರಾಹಿಂ ಅವರ ಮಾಲಕತ್ವದ ಪ್ಲಟಿನಮ್ ಥಿಯೇಟರಿನ ಕಾರ್ ಶೆಡ್ಡಿನ ಬಳಿಯಿರುವ ದೊಡ್ಡ ಕಸಕುಪ್ಪೆಯ ತಳದಲ್ಲಿ ಮಣ್ಣಿನೊಳಗೆ ತುಂಬಾ ಆಳದಲ್ಲಿ ಅಡಿತಿಡಲಾಗಿದ್ದ ಹಲವು ಲಕ್ಷ ರೂಪಾಯಿ ಮೌಲ್ಯದ ಬಿನಾಮಿ ವ್ಯವಹಾರಗಳ ದಸ್ತಾವೇಜುಗಳು ಹಾಗು ಇತರ ದಾಖಲೆಗಳನ್ನೊಳಗೊಂಡ ಬ್ರೀಫ್ ಕೇಸ್ ಒಂದನ್ನು ಮಂಗಳೂರಲ್ಲಿ ಸುಂಕದ ಅಧಿಕಾರಿಗಳು ಶೋಧಿಸಿ ಹೊರತೆಗೆದು ವಶಪಡಿಸಿಕೊಂಡಿರುವರು. ಥಿಯೇಟರಿನ ಜನರಲ್ ಮೆನೇಜರ್, ಮೆನೇಜರ್, ಎಕೌಂಟೆಂಟ್ ಮತ್ತು ಕಾರ್ ಡ್ರೈವರರನ್ನು ಹೆಚ್ಚಿನ ವಿಚಾರಣೆ ಬಗ್ಗೆ ಕಲ್ಲಿಕೋಟೆಗೆ ಕಳುಹಿಸಲಾಗಿದೆಯೆಂದೂ ಸುಂಕದ ಅಧಿಕಾರಿಗಳಿಂದ ತಿಳಿದುಬಂದಿದೆ.

ಕದ್ರಿ ಪೋಲೀಸರ ವಿಕ್ರಮ!

ಕದ್ರಿ ಪೋಲೀಸ್ ಸ್ಟೇಶನಿನ ಸರಹದ್ದಿನಲ್ಲಿ ಪ್ರಚಲಿತ ವರ್ಷದಲ್ಲಿ ಸುಮಾರು 1,02,178 ರೂಪಾಯಿ ಬೆಲೆಯ ಸೊತ್ತುಗಳ ಕಳವು ಸಂಭವಿಸಿದ್ದು ಇಪೈಕಿ ಸುಮಾರು 96,412 ರೂಪಾಯಿ ಮೌಲ್ಯದ ಕಳವು ಸೊತ್ತುಗಳನ್ನು ವಶಪಡಿಸಿಕೊಳ್ಳಲು ಕದ್ರಿ ಪೋಲೀಸರು ಸಮರ್ಥರಾಗಿರುವರೆಂಬ ಅಂಶವನ್ನು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ ಆರ್. ಎಸ್. ಚೋಪ್ರಾ ಅವರು ಕಳೆದ ತಾ. 31ರಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು ಶೇಕಡಾ 87ರಷ್ಟು ಕಳ್ಳತನದ ಪ್ರಕರಣಗಳನ್ನು ಕದ್ರಿ ಪೋಲೀಸರು ಪತ್ತೆಮಾಡಿದಂತಾಯಿತು.

ನವಮಂಗಳೂರು ಬಂದರದ ಅಧಿಕೃತ ಉದ್ಘಾಟನೆ

ನವಮಂಗಳೂರು ಬಂದರದ ಅಧಿಕೃತ ಆರಂಭೋತ್ಸವವನ್ನು ನೆರವೇರಿಸುವರೆ ಭಾರತಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು 1975ರ ಫೇಬ್ರುವರಿ ತಿಂಗಳಲ್ಲಿ ಮಂಗಳೂರಿಗೆ ಖಚಿತವಾಗಿ ಆಗಮಿಸಲಿದ್ದಾರೆಂದು ಅಧಿಕೃತವಾಗಿ ತಿಳಿದುಬಂದಿದೆ.

ಡಾ| ಬಿ. ಆರ್. ಹರಿದಾಸರ ನಿಧನ

ಮಂಗಳೂರಿನ ಸುಪ್ರಸಿದ್ಧ ಆಯುರ್ವೇದ ವೈದ್ಯರಲ್ಲೊಬ್ಬರಾಗಿದ್ದ ಡಾ| ಬಿ. ಆರ್. ಹರಿದಾಸ್ ಅವರು ತಾ. 30ರಂದು ಮಧ್ಯಾಹ್ನ ಸ್ಥಳೀಯ ಮಣ್ಣಗುಡ್ಡೆ ಹರಿದಾಸಲೇನ್‌ದಲ್ಲಿರುವ ಸ್ವಗೃಹದಲ್ಲಿ ತಮ್ಮ 82ನೇ ವಯಸ್ಸಿನಲ್ಲಿ ದೈವಾಧೀನರಾದರು. ಮಂಗಳೂರು ಮಹಾಮಾಯಾ ದೇವಸ್ಥಾನದ ಉಪ್ಪರಿಗೆಯಲ್ಲಿ ಕಳೆದ 5 ದಶಕಗಳಿಗೆ ಮೇಲ್ಪಟ್ಟು ವೈದ್ಯಕೀಯ ವೃತ್ತಿ ನಡೆಸಿಕೊಂಡಿದ್ದ ಶ್ರೀಯುತರು ಆಯುರ್ವೇದ ಔಷಧಗಳನ್ನು ತಯಾರಿಸುವುದರಲ್ಲಿಯೂ ನಿಷ್ಣಾತರಾಗಿದ್ದರು. ಅಖಿಲ ಭಾರತ ಆಯುರ್ವೇದ ಸಮ್ಮೇಳನದ ಅಧ್ಯಕ್ಷಪೀಠವನ್ನು ಅಲಂಕರಿಸಿದ ಹಿರಿತನ ಅವರದು. ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲಗಳಲ್ಲಿಯೂ ಅಧ್ಯಕ್ಷರಾಗಿ ಸೇವೆಸಲ್ಲಿಸಿದವರಿರುತ್ತಾರೆ. ಧರ್ಮಪತ್ನಿ, ಏಕಮಾತ್ರ ಪುತ್ರಿ ಮತ್ತು ಅಪಾರ ಬಂಧುಮಿತ್ರರನ್ನು ಅವರು ಅಗಲಿದ್ದಾರೆ.

——

ಕರ್ನಾಟಕ ರಾಜ್ಯದಲ್ಲಿ ಮಲೇರಿಯಾ ನಿವಾರಣಾ ಪ್ರಯತ್ನಗಳು

(ಶ್ರೀ ಹೆಚ್. ಸಿದ್ಧವೀರಪ್ಪ, ಕರ್ನಾಟಕ ರಾಜ್ಯದ ಆರೋಗ್ಯ ಮಂತ್ರಿಗಳು)

ಹಳೆಯ ರೋಗಗಳಲ್ಲೊಂದಾದ ಮಲೇರಿಯಾ ವಿಶ್ವದಾದ್ಯಂತ ಹರಡಿರುವ ಜಾಡ್ಯ. ಒಂದು ಕಾಲದಲ್ಲಿ ಪ್ರತಿ ಹತ್ತು ಕೋಟಿ ಮಲೇರಿಯಾ ರೋಗಿಗಳಲ್ಲಿ ಒಂದು ಕೋಟಿ ಜನರಿಗೆ ಸಾವು ಸಂಭವಿಸುತ್ತಿತ್ತೆಂದು ಅಂದಾಜು ಮಾಡಲಾಗಿದೆ. ಕೆಲವೊಂದು ಚಕ್ರಾಧಿಪತ್ಯಗಳೇ ಈ ರೋಗಕ್ಕೆ ಬಲಿಯಾದುದಾಗಿ ಚರಿತ್ರಕಾರರು ಹೇಳುತ್ತಾರೆ. ಇಂತಹ ಭೀಕರ ಪಿಡುಗನ್ನು ಹತೋಟಿಗೆ ತಂದುದು ಆಧುನಿಕ ವಿಧಾನ.

ಭಾರತದಲ್ಲಿ ಮಲೇರಿಯಾ ಹತೋಟಿ ಪ್ರಯತ್ನ ಈ ಶತಮಾನದ ಮೊದಲಿನಿಂದಲೇ ಅಲ್ಪ ಪ್ರಮಾಣದಲ್ಲಿ ಆರಂಭವಾಗಿದ್ದರೂ ಕಳೆದ ಎರಡು ದಶಕಗಳಿಂದ ಈಚೆಗಷ್ಟೆ ವ್ಯಾಪಕ ಪ್ರಯತ್ನ ನಡೆದಿರುವುದು. ನಮ್ಮ ರಾಜ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಈ ಮಲೇರಿಯಾ ನಿವಾರಣಾ ಪ್ರಯತ್ನ ಒಂದು ಸಾಹಸವೇ ಸರಿ. ಆರಂಭದಲ್ಲಿ ಮಲೇರಿಯಾ ನಿಯಂತ್ರಣಕಷ್ಟೇ ಸೀಮಿತವಾಗಿದ್ದ ಕಾರ್ಯಕ್ರಮ 1964ರಲ್ಲಿ ರೋಗದ ಪೂರ್ಣ ಮೂಲೋತ್ಪಾಟನದ ಉದ್ದೇಶವುಳ್ಳ ರಾಷ್ಟ್ರೀಯ ಕಾರ್ಯಕ್ರಮವಾಯಿತು. ಇದನ್ನೇ ನಾವು "ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮ"—ಎಂದು ಕರೆಯುತ್ತೇವೆ.

ರಾಷ್ಟ್ರೀಯ ಕಾರ್ಯಕ್ರಮದ ಪ್ರಕಾರ ಮಲೇರಿಯಾ ನಿವಾರಣಾ ಪ್ರಯತ್ನದಲ್ಲಿ ಸಜ್ಜೀಕರಣ ಹಂತ, ಸಾಧನಾ ಹಂತ, ಸಂಘಟನಾ ಹಂತ ಮತ್ತು ಸಂರಕ್ಷಣಾ ಹಂತ—ಎಂದು ನಾಲ್ಕು ಹಂತಗಳಿವೆ. ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಕಾರ್ಯಕ್ರಮವು ಈ ಎಲ್ಲಾ ಹಂತಗಳಲ್ಲೂ ನಮ್ಮ ರಾಜ್ಯದಲ್ಲಿ ಪರಿಣಾಮಕಾರಿಯಾಗಿ ನಡೆದಿದೆ. 1969–70ರ ವರೆಗೆ ನಡೆದ ಬಿರುಸಿನ ಪ್ರಯತ್ನದ ಫಲವಾಗಿ ರಾಜ್ಯದ ಶೇಕಡ 80 ಭಾಗ ಸಂರಕ್ಷಣಾ ಹಂತವನ್ನು ತಲಪಿತ್ತು. 1952ರಲ್ಲಿ ಪ್ರತಿ ಹತ್ತು ಲಕ್ಷ ಜನರಲ್ಲಿ ಎರಡು ಲಕ್ಷ ಮಲೇರಿಯಾ ರೋಗಪೀಡಿತರಿದ್ದರು. 1970ರಲ್ಲಿ, ಆ ಸಂಖ್ಯೆ 1300ಕ್ಕೆ ಇಳಿಯಿತು. ಹಾಗೆಯೇ ಮಲೇರಿಯಾ ರೋಗದಿಂದ ಪ್ರತಿ ಹತ್ತು ಲಕ್ಷಕ್ಕೆ 2000ದಂತೆ ಸಂಭವಿಸುತ್ತಿದ್ದ ಸಾವಿನ ಸಂಖ್ಯೆಯೂ ಸಹ ಅಪರೂಪವಾಯಿತು. ಈ ಸಾಧನೆ ನಿಜಕ್ಕೂ ತೃಪ್ತಿಪಟ್ಟುಕೊಳ್ಳುವಂತಹದು.

—o—

ಹತ್ತಿಬೀಜದಿಂದ ಪ್ರೋಟೀನುಸಮೃದ್ಧ ಹಿಟ್ಟು

(ವಿಲಿಯಂ ಎಚ್. ಸ್ಟಿಂಗರ್)

ಹತ್ತಿಬೀಜದಿಂದ ತಯಾರಿಸಿದ ಒಂದು ಪ್ರೋಟೀನ್ ಸಮೃದ್ಧ ಹಿಟ್ಟು ಪ್ರಪಂಚದ ಲಕ್ಷಾಂತರ ಮಂದಿ ಹಸಿದ ಜನರಿಗೆ ಆಹಾರವೊದಗಿಸುವಲ್ಲಿ ಸಹಾಯಕವಾಗಬಹುದು. ಹತ್ತಿ, ಪ್ರಪಂಚದ ಅನೇಕ ಭಾಗಗಳಲ್ಲಿ ಸಾಮಾನ್ಯವಾಗಿ ಬೆಳೆಯುವ ಒಂದು ಕೃಷಿ ಉತ್ಪನ್ನ. ಸಂಶೋಧಕರು ಈ ಉತ್ಪನ್ನವನ್ನು ಮಾನವರಿಗೆ ತಿನ್ನಲು ಯೋಗ್ಯವಾದ ಮತ್ತು ಪೌಷ್ಟಿಕವಾದ ಆಹಾರವಾಗಿ ಮಾಡುವ ವಿಧಾನವನ್ನು ಅಭಿವೃದ್ಧಿಗೊಳಿಸಿದ ನಂತರ ಈ ವರ್ಷ ಟೆಕ್ಸಾಸಿನ ಲ್ಯೂಬಾಕ್‌ನಲ್ಲಿರುವ ಒಂದು ಕಾರ್ಖಾನೆ ಹತ್ತಿಬೀಜದ ಹಿಟ್ಟಿನ ವಾಣಿಜ್ಯ ಉತ್ಪಾದನೆಯನ್ನಾರಂಭಿಸಲು ಯೋಜಿಸಿದೆ. ಭಾರತದಲ್ಲೂ ಸಹ ಒಂದು ಪ್ರಾಯೋಗಿಕ ಕಾರ್ಖಾನೆ ಕಾರ್ಯನಿರ್ವಹಿಸುತ್ತಿದೆ.

ಹತ್ತಿಬೀಜದ ಹಿಟ್ಟಿನಲ್ಲಿ ಶೇಕಡ 65ರಿಂದ 86ರಷ್ಟು ಪ್ರೋಟೀನ್ ಅಂಶವಿರುವುದು. ಇದು ಮಾನವನ ಆಹಾರದಲ್ಲಿನ ಒಂದು ಅತಿ ಮುಖ್ಯಾಂಶ. ಇದು ಸೋಯಾಬೀನ್ ಹಿಟ್ಟಿನಷ್ಟೇ ಪೌಷ್ಟಿಕವಾಗಿರುವುದೆಂದೂ ಮತ್ತು ಮೀನು ಅಥವಾ ಕೋಳಿಯಲ್ಲಿರುವುದಕ್ಕಿಂತ ಹೆಚ್ಚು ಪ್ರೋಟೀನ್ ಹೊಂದಿರುವುದೆಂದೂ ಹೇಳಲಾಗಿದೆ,

ಈ ಹೊಸ ಹಿಟ್ಟನ್ನು ಬ್ರೆಡ್, ಸೇವಿಗೆ, ನೂಡಲ್‌ಗಳು, ಬೆಳಗಿನ ತಿಂಡಿ, ಗಂಜಿ, ಚಪಾತಿ ಅಥವಾ ಹಿಟ್ಟಿನಿಂದ ತಯಾರಿಸುವ ಇತರ ಯಾವುದೇ ಆಹಾರಪದಾರ್ಥಗಳ ಸತ್ವವನ್ನು ಹೆಚ್ಚಿಸಲು ಬಳಸಬಹುದು. ಸೋಯಾಬೀನ್ ಮತ್ತು ನೆಲಗಡಲೆಗಳಂತಲ್ಲದೆ ಹತ್ತಿಯನ್ನು ಈಗಾಗಲೇ ವಿಸ್ತೃತವಾಗಿ ಭಾರತ, ಪಾಕಿಸ್ತಾನ, ಈಜಿಪ್ಟ್ ಮತ್ತು ಮಧ್ಯಪ್ರಾಚ್ಯ ಹಾಗೂ ಆಫ್ರಿಕಾ ಮುಂತಾದ ಅಭಿವೃದ್ಧಿಶೀಲ ದೇಶಗಳಲ್ಲಿ ವಿಶಾಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ.

ಬೀಜದಲ್ಲಿರುವ, ಮಾನವರಿಗೆ ಅಪಾಯಕಾರಿಯಾದ ಒಂದು ಗ್ರಂಥಿಯನ್ನು ತೆಗೆದುಹಾಕುವ ಮೂಲಕ ತಿನ್ನಲು ಯೋಗ್ಯವಾದ ಹತ್ತಿಬೀಜದ ಹಿಟ್ಟನ್ನು ತಯಾರಿಸುವ ವಿಧಾನವನ್ನು ಅಮೆರಿಕದ ಕೃಷಿ ಇಲಾಖೆಯ ವಿಜ್ಞಾನಿಗಳು ಅಭಿವೃದ್ಧಿಗೊಳಿಸಿದರು.

—o—

ಬಾಯಿವಿಕಾರ ಸರಿಪಡಿಸಲು ಮೂಳೆ ಕಸಿ

ಪ್ರಾಣಿಗಳಲ್ಲಿ ಯಶಸ್ವಿಯಾಗಿ ಪ್ರಯೋಗಿಸಲಾಗಿರುವ ಮೂಳೆ ಕಸಿಮಾಡುವ ಒಂದು ಹೊಸ ತಂತ್ರದಿಂದಾಗಿ ಸೀಳಿದ ಅಂಗುಳು (ಒಂದು ಬಗೆಯ ಬಾಯಿ ವಿಕಾರ) ವಿನೊಡನೆ ಹುಟ್ಟಿದ ಜನರಿಗೆ ಪ್ರಯೋಜನವಾಗಬಹುದು. ಈ ಹೊಸ ವಿಧಾನದ ಮೇರೆಗೆ ಪ್ರಾಣಿಗಳ ಟೊಂಕದಿಂದ ತೆಗೆಯಲಾದ ಮೂಳೆ ಕಸಿಗಳನ್ನು ಅವುಗಳ ಮೇಲ್ದವಡೆಯಲ್ಲಿ ನೆಲೆಗೊಳಿಸಲಾಯಿತು. ಇದರಿಂದ ಪ್ರಾಣಿಗಳ ದವಡೆಯಲ್ಲಿ ಹೊಸ ಮೂಳೆ ಬೆಳೆದುದೇ ಅಲ್ಲದೆ ಶಸ್ತ್ರಕ್ರಿಯೆಯಿಂದಾಗಿ ಉಂಟಾದ ಬಿರುಕು ಶೀಘ್ರವಾಗಿ ಮಾಯಲು ಸಾಧ್ಯವಾಯಿತು ಎಂದು ಚಿಕಿತ್ಸಾನಂತರದ ಅಧ್ಯಯನಗಳು ಸೂಚಿಸಿವೆ.

—o—

ವಿಮಾನ ವೇಳಾಪಟ್ಟಿಯಲ್ಲಿ ಬದಲಾವಣೆ

ಮುಂಬಯಿ – ಮಂಗಳೂರು—ಮುಂಬಯಿ ವಿಮಾನಯಾನ ವೇಳಾಪಟ್ಟಿಯಲ್ಲಿ ನವೆಂಬರ್ ತಾ. 1ರಿಂದ ಈ ಕೆಳಗಿನಂತೆ ಮಾರ್ಪಾಟು ಮಾಡಲಾಗಿದೆ.

ಮುಂಬಯಿಯಿಂದ ಅಪರಾಹ್ನ 1–45ಕ್ಕೆ ಹೊರಟು ಸಂಜೆ ನಾಲ್ಕು ಗಂಟೆಗೆ ಮಂಗಳೂರಿಗೆ ತಲಪುವುದು; ಮಂಗಳೂರಿನಿಂದ ಸಂಜೆ 4-25ಕ್ಕೆ ಹೊರಟು 6–40ಕ್ಕೆ ಮುಂಬಾಯಿಗೆ ತಲಪುವುದು.

ಪೋಲಿನ ಮಾರ್ಪಾಟದಿಂದ ಮುಂಬಯಿಯಲ್ಲಿ ಡಿಲ್ಲಿ ಮತ್ತು ಕಲ್ಕತ್ತಾಗಳಿಗೆ ಕನೆಕ್ಷನ್ ದೊರೆಯಲು ಅನುಕೂಲವಾಗುವುದೆನ್ನಲಾಗಿದೆ.

ಗ್ರಂಥಾಲಯದಲ್ಲಿ ಸರ್ವಧರ್ಮ ಸಮ್ಮೇಳನ

ಮಂಗಳೂರು ಕೊಡಿಯಾಲಬೈಲಿನಲ್ಲಿರುವ ದ. ಕ. ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಸರ್ವಧರ್ಮ ಸಮ್ಮೇಳನವೊಂದು ತಾ. 27ರಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪಂಡಿತ ಭುಜಬಲಿ ಶಾಸ್ತ್ರಿಯವರು ಜೈನ ಮತದ ಕುರಿತು, ಕುಮಾರಿ ಎಸ್. ಜೆ. ಕುಲಾಸೋ ಕ್ರೈಸ್ತಧರ್ಮದ ಕುರಿತು, ಶ್ರೀ| ಎಂ. ಆರ್. ಗಜೇಂದ್ರಗಡ್ ಇಸ್ಲಾಮದ ಬಗ್ಗೆ, ಶ್ರೀ| ಐ. ಕೆ. ಪಿ. ಶರ್ಮಾ ಹಿಂದೂಧರ್ಮದ ಕುರಿತಾಗಿ ಮತ್ತು ಶ್ರೀ| ಎಸ್.ವಿ. ಪರಮೇಶ್ವರ ಭಟ್ಟರು ಬೌದ್ಧ ಧರ್ಮದ ಕುರಿತು ಮಾತನಾಡಿದ್ದರು.

ರಾಜ್ಯೋತ್ಸವ ಪ್ರಶಸ್ತಿ

ಕರ್ನಾಟಕ ರಾಜ್ಯೋತ್ಸವ ದಿನದ ಸಂಬಂಧ ಕರ್ನಾಟಕ ಸರಕಾರವು ವಿವಿಧ ಸೇವೆ ಹಾಗು ಸಾಧನೆ ಪ್ರತಿಭೆಗಳಿಗೆ ಪ್ರಶಸ್ತಿ ನೀಡಿದ ಹತ್ತು ಮಂದಿಯಲ್ಲಿ ಮಂಗಳಗಂಗೋತ್ರಿಯ ಮಾಜಿ ನಿರ್ದೇಶಕ ಶ್ರೀ| ಎಸ್. ವಿ. ಪರಮೇಶ್ವರ ಭಟ್ ಮತ್ತು ಕೃಷಿ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಶ್ರೀ| ಕೆ. ಸಿ. ನಾಯ್ಕ್ ಇವರಿಬ್ಬರು.

ಅಕ್ರಮ ಸಾಗಾಟದ ಅಕ್ಕಿ ಪತ್ತೆ

ಕಳೆದ ತಾ. 31ರಂದು ಅಪರಾಹ್ನ ಮಂಗಳೂರಿಂದ ಹೊರಟಿದ್ದ ಎರಡು ರೈಲು ಗಾಡಿಗಳಲ್ಲಿ ಕೇರಳಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದರೆನ್ನಲಾದ ಸುಮಾರು 578 ಕೆ.ಜಿ. ಅಕ್ಕಿಯನ್ನು ರೈಲ್ವೇ ವಿಶೇಷ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ| ಶಾಂತಾರಾಮ ಶೆಟ್ಟಿಯವರು ಅವರ ಸಿಬಂದಿಗಳ ನೆರವಿನಿಂದ ಪತ್ತೆಹಚ್ಚಿ ವಶಪಡಿಸಿಕೊಂಡುದು ವರದಿಯಾಗಿದೆ.

ವಾರ್ಷಿಕ ವಿಶೇಷಾಂಕದ ಉದ್ಘಾಟನೆ

ಉಡುಪಿ ಸಮೀಪದ ಕಡಿಯಾಳಿ ಶ್ರೀ ಮಹಿಷಮರ್ಧಿನಿ ದೇವಸ್ಥಾನದ ನವರಾತ್ರಿ ಉತ್ಸವದ ಸಂದರ್ಭದಲ್ಲಿ "ಯುಗಪುರುಷ" ಪತ್ರಿಕೆಯ 28ನೆಯ ದಸರಾ–ದೀಪಾವಳಿ ವಿಶೇಷಾಂಕವನ್ನು ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ| ಕೆ. ಕೆ. ಪೈಯವರು ಉದ್ಘಾಟಿಸಿದರು. ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು.

ಸ್ಮಾರಕ ಕಟ್ಟಡದ ಶಿಲಾನ್ಯಾಸ

ಪುತ್ತೂರು ಸೈಂಟ್ ಫಿಲೊಮಿನಾ ಬಾಲಕರ ಶಾಲೆಯ ರಜತೋತ್ಸವದ ಸ್ಮಾರಕವಾಗಿ ಸುಮಾರು ಮೂರು ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಿಸಲಾಗುವ ಕಟ್ಟಡಕ್ಕೆ ತಾ. 29ರಂದು ಧರ್ಮಸ್ಥಳದ ಶ್ರೀ| ವೀರೇಂದ್ರ ಹೆಗ್ಗಡೆಯವರು ಶಿಲಾನ್ಯಾಸಗೈದರು. ಮಂಗಳೂರಿನ ಬಿಶಪ್ ರೈ| ರೆ| ಬಾಸಿಲ್ ಡಿ'ಸೋಜಾರವರು ಮುಖ್ಯ ಅತಿಥಿಗಳಾಗಿ ಹರಸಿದರು.

ಮುದ್ರಾಡಿ ಕೃಷ್ಣಶೆಟ್ಟರ ನಿಧನ

ದಕ್ಷಿಣ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ, ಅಚ್ಚ ಗಾಂಧೀವಾದಿ, ವಾಗ್ಮಿ ಶ್ರೀ| ಮುದ್ರಾಡಿ ಕೃಷ್ಣಶೆಟ್ಟರು ದೀರ್ಘಾವಧಿ ಅಸ್ವಸ್ಥದ ಬಳಿಕ ತಾ. 30ರಂದು ಮಣಿಪಾಲದ ಕಸ್ತೂರ್‌ಬಾ ಆಸ್ಪತ್ರೆಯಲ್ಲಿ ತಮ್ಮ 72ನೇ ವಯಸ್ಸಿನಲ್ಲಿ ನಿಧನರಾದರು. ಗಾಂಧೀಜಿಯವರ ಕರೆಗೆ ಓಗೊಟ್ಟು 1931ರಲ್ಲಿ ತನ್ನ ಅಧ್ಯಾಪಕ ವೃತ್ತಿಗೂ ರಾಜೀನಾಮೆಯಿತ್ತು ದೇಶದ ಸ್ವಾತಂತ್ರ್ಯಹೋರಾಟರಂಗಕ್ಕೆ ದುಮುಕಿ, ನಿರಂತರ ಶ್ರಮಿಸಿರುವ ಶ್ರೀಯುತರು ಜಿಲ್ಲೆಯ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲೊಬ್ಬರು. ಜಿಲ್ಲಾ ಬೋರ್ಡ್ ಸದಸ್ಯರಾಗಿ, ಜಿಲ್ಲಾ ಪಾನನಿರೋಧ ಸಮಿತಿಯ ಸದಸ್ಯರಾಗಿ, ಡಿ. ಸಿ. ಸಿ. ಸದಸ್ಯರಾಗಿ, ಜಿಲ್ಲಾ ಕೊಂಗ್ರೆಸ್ ಸಂಘಟಕರಾಗಿ ಸಮಾಜ ಸುಧಾರಣೆಯ ವಿವಿಧ ರಂಗಗಳಲ್ಲಿ ದೀರ್ಘಕಾಲದ ನಿಸ್ವಾರ್ಥ ಸೇವೆಯನ್ನು ಅವರು ಸಲ್ಲಿಸಿದ್ದಾರೆ. ಶ್ರೀಯುತರು ಸಾಹಿತಿಯಾಗಿಯೂ ಕನ್ನಡ ಸಾಹಿತ್ಯದ ಸೇವೆಗೈದವರಿರುತ್ತಾರೆ.

—o—

PRABHAT, KANNADA WEEKLY, MANGALORE-575001
REGD. No. KRNL-8.

To

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.